# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:19-07-2024ರಂದು ಶುಕ್ರವಾರ ಪೂರ್ವಾಹ್ನ 11.00 ಗಂಟೆಗೆ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ ಸಾಮಾನ್ಯ ಸಿಂಡಿಕೇಟ್ ಸಭೆ"ಯ ನಡಾವಳಿಗಳು.

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಎ.ಎಲ್. ಮಂಜುನಾಥ್, ಕುಲಸಚಿವರು ಕೆ.ಎ.ಎಸ್.(ಸೂಪರ್ ಟೈಮ್ ಶ್ರೇಣಿ) | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಗೋಪಿನಾಥ್ ಎಸ್.ಎಂ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಡಾ. ವಿಷ್ಣುಮೂರ್ತಿ ಕೆ.ಎ. ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಪ್ರೊ. ಎಸ್.ವಿ. ಕೃಷ್ಣಮೂರ್ತಿ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |
| 6. | ಶ್ರೀ ಶಾಂತಕುಮಾರ್ ಜಿ.ಎಸ್. | ಸದಸ್ಯರು |
| 7. | ಶ್ರೀ ಶಶಿಧರ್ ಬಿ.ಎನ್. | ಸದಸ್ಯರು |
| 8. | ಡಾ. ಸಣ್ಣಹನುಮಪ್ಪ ಜಿ. ಪ್ರಾಂಶುಪಾಲರು | ಸದಸ್ಯರು |
| 9. | ಡಾ. ಅನಂತ ಎಸ್. ಪ್ರಾಂಶುಪಾಲರು | ಸದಸ್ಯರು |
| 10. | ಡಾ. ಅರುಣಾ ಎ. ಪ್ರಾಂಶುಪಾಲರು | ಸದಸ್ಯರು |

ಗೈರುಹಾಜರಾದ ಸದಸ್ಯರು:

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.. | ಸದಸ್ಯರು |

ಪ್ರಸ್ತಾವನೆ:

ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು.

ಸಭೆಯ ಆರಂಭದಲ್ಲಿ ಕುವೆಂಪು ವಿಶ್ವವಿದ್ಯಾಲಯದ ನೂತನ ಕುಲಪತಿಗಳಾಗಿ ನೇಮಕಗೊಂಡ ಪ್ರೊ. ಶರತ್‌ಅನಂತಮೂರ್ತಿ, ಕುಲಸಚಿವರಾಗಿ ಸರ್ಕಾರದಿಂದ ನೇಮಕಗೊಂಡ ಶ್ರೀ ಎ.ಎಲ್. ಮಂಜುನಾಥ, ಕೆ.ಎ.ಎಸ್. (ಸೂಪರ್ ಟೈಂ ಸ್ಕೇಲ್), ಹಾಗೂ ನೂತನವಾಗಿ ಸಿಂಡಿಕೇಟ್ ಸದಸ್ಯರಾಗಿ ನೇಮಕಗೊಂಡ ಪ್ರೊ. ಎಸ್.ವಿ. ಕೃಷ್ಣಮೂರ್ತಿ, ಡೀನರು, ವಿಜ್ಞಾನ ನಿಕಾಯ ಇವರನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಎರಡು ಬಾರಿ ಪ್ರಭಾರ ಕುಲಪತಿಗಳಾಗಿ ಕಾರ್ಯ ನಿರ್ವಹಿಸಿದ ಪ್ರೊ. ಎಸ್.ವಿ. ಕೃಷ್ಣಮೂರ್ತಿ ಹಾಗೂ ಕುಲಸಚಿವರಾಗಿ ಕರ್ತವ್ಯ ನಿರ್ವಹಿಸಿ ವರ್ಗಾವಣೆಗೊಂಡ ಶ್ರೀ ವಿಜಯಕುಮಾರ್ ಹೆಚ್.ಬಿ. ಕೆ.ಎ.ಎಸ್. ಹಾಗೂ ಪ್ರಭಾರ ಕುಲಸಚಿವರಾಗಿ ಕಾರ್ಯನಿರ್ವಹಿಸಿದ ಪ್ರೊ. ಎಸ್.ಎಂ. ಗೋಪಿನಾಥ್ ಇವರುಗಳನ್ನು ಅಭಿನಂದಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಮಾನ್ಯ ಕುಲಪತಿಯವರು. ಮಾರ್ಚ್ 07, 2024ರಂದು ಕುವೆಂಪು ವಿಶ್ವವಿದ್ಯಾಲಯದ ಕುಲಪತಿಯಾಗಿ ತುಂಬಾ ಭರವಸೆಯಿಂದ ಬಂದು ವರದಿ ಮಾಡಿಕೊಂಡಿದ್ದೇನೆ. ನನಗೆ ಇಲ್ಲಿ ಕರ್ತವ್ಯ ನಿರ್ವಹಿಸಲು ಬಹಳ ಹೆಮ್ಮೆ ಇದೆ. ವಿಶ್ವವಿದ್ಯಾಲಯದ ಒಳಿತಿಗಾಗಿ ಎಲ್ಲರೂ ಶ್ರಮಿಸೋಣ. ಇಲ್ಲಿನ ಸಿಂಡಿಕೇಟ್ ಸದಸ್ಯರು ಪ್ರಬುದ್ಧರಾಗಿದ್ದೀರಿ. ವಿಶ್ವವಿದ್ಯಾಲಯದ ಶೈಕ್ಷಣಿಕ ಹಾಗೂ ಸಂಶೋಧನಾ ಅಭಿವೃದ್ಧಿಗೆ ಸಹಕರಿಸುವಂತೆ ವಿನಂತಿಸಿದರು. ಮುಂದುವರೆದು ಮಾತನಾಡಿದ ಮಾನ್ಯ ಕುಲಪತಿಯವರು, ವಿಶ್ವವಿದ್ಯಾಲಯವು ನ್ಯಾಕ್ ಮರುಮೌಲ್ಯಮಾಪನಕ್ಕೆ ಒಳಪಡುತ್ತಿರುವ ಹಿನ್ನೆಲೆಯಲ್ಲಿ, ಉದ್ಯೋಗಿಗಳು ಹಗಲಿರುಳು ಶ್ರಮಿಸುತ್ತಿದ್ದಾರೆ. ಇದಕ್ಕಾಗಿ ಈಗಾಗಲೇ 2 ದಿನಗಳ ಕಾರ್ಯಾಗಾರ ನಡೆಸಲಾಗಿದೆ. ಕಳೆದ ಜೂನ್ 24 ಮತ್ತು 25ರಂದು Academic and Administrative Audit ಸಮಿತಿಯು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದ್ದು, ಸಮಿತಿಯು



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ವಿಶ್ವವಿದ್ಯಾಲಯದ ವಿವಿಧ ವಿಭಾಗಗಳು ಹಾಗೂ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿದ್ದು, ಸುದೀರ್ಘ ಚರ್ಚೆ ನಡೆಸಿ, ಮುಂದಿನ ನ್ಯಾಕ್ ಪೀರ್ ಸಮಿತಿ ಭೇಟಿ ಹಿನ್ನೆಲೆಯಲ್ಲಿ ಅಗತ್ಯವಾದ ಸಲಹೆ ಮತ್ತು ಸೂಚನೆಗಳನ್ನು ನೀಡಿದೆ. ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಯವರಾದ ಪ್ರೊ.ಕೆ. ಚಿದಾನಂದಗೌಡರವರು ಈ ಸಮಿತಿಯ ಅಧ್ಯಕ್ಷರಾಗಿದ್ದರು. ಉಳಿದಂತೆ ಸಮಿತಿಯಲ್ಲಿ ಪ್ರೊ. ಹರೀಶ್ ರಾಮಸ್ವಾಮಿ, ಕುಲಪತಿಯವರು, ರಾಯಚೂರು ವಿಶ್ವವಿದ್ಯಾಲಯ, ಪ್ರೊ. ದಯಾನಂದ ಅಗಸರ್, ಕುಲಪತಿಯವರು ಗುಲ್ಬರ್ಗಾ ವಿಶ್ವವಿದ್ಯಾಲಯ, ಪ್ರೊ. ಹರಿನಾರಾಯಣ, ನಿರ್ದೇಶಕರು. ಐ.ಕ್ಯೂ.ಎ.ಸಿ., ಮೈಸೂರು ವಿಶ್ವವಿದ್ಯಾಲಯ ಹಾಗೂ ಪ್ರೊ. ಸುದರ್ಶನ ರೆಡ್ಡಿ, ತುಮಕೂರು ವಿಶ್ವವಿದ್ಯಾಲಯ – ಇವರುಗಳು ಸದಸ್ಯರಾಗಿದ್ದರು ಎಂದರು.

ಭಾರತ ಸರ್ಕಾರದ PURSE ಯೋಜನೆ ಅಡಿಯಲ್ಲಿ ವೈಜ್ಞಾನಿಕ ಸಂಶೋಧನೆಗಾಗಿ ರೂ.15.00 ಕೋಟಿಗಳ ಸಂಶೋಧನಾ ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿದ್ದು, ಮಂಜೂರಾಗಬಹುದೆಂಬ ಭರವಸೆಯಲ್ಲಿದ್ದೇವೆ. ಮಂಜೂರಾದಲ್ಲಿ ಸಂಶೋಧನಾ ಚಟುವಟಿಕೆಗಳಿಗೆ ಅನುಕೂಲವಾಗುತ್ತದೆ. ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಸಂಶೋಧನಾ ಅಭಿವೃದ್ಧಿಗಾಗಿ ಆಗಬೇಕಾಗಿರುವ ಅವಶ್ಯಕತೆಗಳ ಬಗ್ಗೆ ಮಾಹಿತಿ ಪಡೆಯುವ ಸಲುವಾಗಿ Stake Holder ಗಳ ಸಭೆಯನ್ನು ನಡೆಸಲಾಗಿತ್ತು. ಸಭೆಯಲ್ಲಿ ಅತ್ಯುತ್ತಮವಾದ ಸಲಹೆಗಳು ಬಂದಿವೆ. ಅವುಗಳನ್ನು ಪರಿಶೀಲಿಸಿ ಮುಂದಿನ 5 ವರ್ಷಗಳಲ್ಲಿ ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುವುದು ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಕುಲಸಚಿವರು, ವಿಶ್ವವಿದ್ಯಾಲಯದ ಭೂ ಪ್ರದೇಶದ ನವೀಕರಣವು ಬಹಳ ವರ್ಷಗಳಿಂದ ಅರಣ್ಯ ಇಲಾಖೆಯ ಪರಿಶೀಲನೆಯಲ್ಲಿತ್ತು. ಹಿಂದಿನ ಕೆಲ ಕುಲಪತಿಗಳು ಹಾಗೂ ಕುಲಸಚಿವರು ಇದಕ್ಕಾಗಿ ಶ್ರಮಿಸಿದ್ದಾರೆ. ಪ್ರಸ್ತುತ, ನವೀಕರಣದ ಸಲುವಾಗಿ ಅರಣ್ಯ ಇಲಾಖೆಯೊಂದಿಗೆ ಸಭೆಗಳನ್ನು ನಡೆಸಿದ್ದು, ನಿರಂತರ ಸಂಪರ್ಕದಲ್ಲಿದ್ದೇವೆ. ಪ್ರಸ್ತಾವನೆಯು ಅಂತಿಮ ಹಂತದಲ್ಲಿದ್ದು, ಶೀಘ್ರದಲ್ಲಿ ಇತ್ಯರ್ಥವಾಗುವ ಸಾಧ್ಯತೆ ಇದೆ. ಅಲ್ಲದೆ ಸಹ್ಯಾದ್ರಿ ಕಾಲೇಜಿನ ಜಾಗ ಒತ್ತುವರಿಯಾಗಿರುವ ಮಾಹಿತಿ ಇದ್ದು, ಒತ್ತುವರಿ ತೆರವುಗೊಳಿಸಲು ಕ್ರಮಕೈಗೊಳ್ಳಲಾಗಿದೆ. ಹಾಗೆಯೇ ಸಿಂಗನಮನೆ ವ್ಯಾಪ್ತಿಯಲ್ಲಿರುವ ವಿಶ್ವವಿದ್ಯಾಲಯದ ಭೂಪ್ರದೇಶದ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಕೂಡ ಕ್ರಮ ಕೈಗೊಳ್ಳಲಾಗಿದೆ ಎಂದರು.

ಮುಂದುವರೆದು ಮಾತನಾಡಿದ ಅವರು ಕುವೆಂಪು ವಿಶ್ವವಿದ್ಯಾಲಯ ಆರಂಭವಾಗಿ ಸುಮಾರು 37 ವರ್ಷವಾಗಿದ್ದು, ಈವರೆಗೂ ತನ್ನದೇ ಆದ ಸಿ. ಅಂಡ್ ಆರ್. ನಿಯಮವನ್ನು ಮಾಡಿಕೊಳ್ಳದೇ ಮೈಸೂರು ವಿಶ್ವವಿದ್ಯಾಲಯದ್ದನ್ನೇ ಅನುಸರಿಸಿಕೊಳ್ಳಲಾಗುತ್ತಿದೆ. ಸರ್ಕಾರವು ಪ್ರತ್ಯೇಕ ಸಿ. ಅಂಡ್ ಆರ್. ನಿಯಮವನ್ನು ಮಾಡಿಕೊಳ್ಳುವಂತೆ ತಿಳಿಸಿದೆ. ಈ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯದ ಪ್ರತ್ಯೇಕ ಸಿ. ಅಂಡ್ ಆರ್. ನಿಯಮವನ್ನು ಸಿದ್ಧಪಡಿಸಲು ಕ್ರಮವಹಿಸಲಾಗಿದೆ. ಇದಕ್ಕಾಗಿ ಸರ್ಕಾರದ ಡಿ.ಪಿ.ಎ.ಆರ್.ನ ಅನುಭವಿ ನಿವೃತ್ತ ಅಧಿಕಾರಿಗಳನ್ನು ಸಂಪರ್ಕಿಸಲಾಗಿದ್ದು, ಅವರು ಈಗಾಗಲೇ ಕಾರ್ಯೋನ್ಮುಖರಾಗಿದ್ದಾರೆ. ವಿಶ್ವವಿದ್ಯಾಲಯದಲ್ಲಿ ಉಪಕುಲಸಚಿವರ ಹುದ್ದೆಗಳಿಗೆ ಕಳೆದ 15 ವರ್ಷಗಳಿಂದ ಬಡ್ತಿ ನೀಡಿಲ್ಲ. ಇದರಿಂದಾಗಿ ಹಲವಾರು ನೌಕರರು ಬಡ್ತಿ ಸೌಲಭ್ಯ ವಂಚಿತರಾಗಿ ನಿವೃತ್ತರಾಗಿದ್ದಾರೆ. ಇದು ನನ್ನ ಗಮನಕ್ಕೆ ಬಂದ ನಂತರ ಈ ಬಗ್ಗೆ ಕಾರ್ಯಪ್ರವೃತ್ತನಾಗಿದ್ದು, ಬಡ್ತಿ ಪ್ರಕ್ರಿಯೆ ಆರಂಭಿಸಲಾಗಿದೆ ಎಂದರು.

ನಂತರ ಕಾರ್ಯಸೂಚಿಯನ್ವಯ ವಿಷಯಗಳನ್ನು ಕೈಗೆತ್ತಿಕೊಳ್ಳಲಾಯಿತು.

**ಪ್ರಾಧಿಕಾರ ವಿಭಾಗ**

**2024–ಸಿಂ–3.01:** ದಿನಾಂಕ:16–02–2024 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳ ದೃಢೀಕರಣ.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ದಿನಾಂಕ:16–02–2024 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಅನುಮೋದಿಸಿ ದೃಢೀಕರಿಸಲಾಯಿತು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

**2024–ಸಿಂ–3.01(ಎ):** ದಿನಾಂಕ:16–02–2024 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳು.

**ಚರ್ಚೆ:** 01) ದಿನಾಂಕ:16–02–2024 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ:2024–ಸಿಂ–1.01ರಲ್ಲಿ ಸಿಂಡಿಕೇಟ್ ಸದಸ್ಯರಿಂದ ಬಂದ ಆಕ್ಷೇಪಣೆಗಳ ಚರ್ಚೆ ಮತ್ತು ನಿರ್ಣಯದ ಮೇಲೆ ಕೈಗೊಂಡ ಕ್ರಮದ ಪ್ರಕಾರ ದಿನಾಂಕ: 02–12–2023ರಂದು ನಡೆದ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ:2023–ಸಿಂ–7.01ರಲ್ಲಿನ ನಿರ್ಣಯದನ್ವಯ ಡಾ.ಚಂದ್ರಶೇಖರ್ ಕೆ. ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ವಿಭಾಗ ಇವರ ವಿರುದ್ಧ ಸಲ್ಲಿಕೆಯಾಗಿದ್ದ ದೂರುಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಕುಲಸಚಿವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿರುವುದನ್ನು ಸಭೆಯು ಪರಿಶೀಲಿಸಿತು. ಈ ಸಂದರ್ಭದಲ್ಲಿ ಮಾತನಾಡಿದ ಸದಸ್ಯರಾದ ಪ್ರೊ.ಸಣ್ಣಹನುಮಪ್ಪರವರು ಮಾತನಾಡಿ, ವಿಶ್ವವಿದ್ಯಾಲಯದ ಅಧ್ಯಾಪಕ ಮತ್ತು ಅಧ್ಯಾಪಕೇತರ ನೌಕರರು ಒಬ್ಬರ ಮೇಲೊಬ್ಬರು ಆರೋಪ ಮಾಡುವುದು, ಸಹೋದ್ಯೋಗಿಗಳ ವಿರುದ್ಧ ಪೋಲೀಸ್ ಠಾಣೆಗಳಲ್ಲಿ ದೂರು ದಾಖಲಿಸುವುದು, ಬಾಹ್ಯ ವ್ಯಕ್ತಿಗಳಿಗೆ ಸಹಕರಿಸಿ ಅವರ ಮುಖಾಂತರ ದೂರುಗಳನ್ನು ಸಲ್ಲಿಸುವುದು ಮುಂತಾದ ಚಟುವಟಿಕೆಗಳನ್ನು ಮಾಡಬಾರದು ಎಂದರು. ಶ್ರೀ ಶಶಿಧರ ಬಿ.ಎಸ್. ರವರು ಮಾತನಾಡಿ ಸಮಾಜಕ್ಕೆ ಉತ್ತಮ ಸಂದೇಶ ನೀಡಬೇಕಾದ ಅಧ್ಯಾಪಕರು ಒಬ್ಬರ ಮೇಲೊಬ್ಬರು ದೂರುವುದು, ದೂರಿನ ಕುರಿತು ಅಧ್ಯಾಪಕರ ವಿಚಾರಣೆ ಮಾಡುವುದು ಶಿಕ್ಷಣ ಕ್ಷೇತ್ರದಲ್ಲಿ ಒಳ್ಳೆಯ ಬೆಳವಣಿಗೆಯಲ್ಲ. ವಿಶ್ವವಿದ್ಯಾಲಯದ ಘನತೆ ಎತ್ತಿಹಿಡಿಯಬೇಕಾದವರ ಈ ರೀತಿಯ ನಡವಳಿಕೆಗಳು ಸರಿಯಲ್ಲ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ ಒಬ್ಬರ ವಿರುದ್ಧ ಇನ್ನೊಬ್ಬರು ಸಲ್ಲಿಸಿರುವ ದೂರುಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಲು ರಚಿಸಿರುವ ಸಮಿತಿಯನ್ನು ರದ್ದುಮಾಡಬೇಕು ಎಂದರು.

ಚರ್ಚೆಯ ನಂತರ ಡಾ.ಚಂದ್ರಶೇಖರ್ ಕೆ. ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ವಿಭಾಗ ಇವರ ವಿರುದ್ಧ ಸಲ್ಲಿಕೆಯಾಗಿದ್ದ ದೂರುಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಕುಲಸಚಿವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯನ್ನು ರದ್ದುಗೊಳಿಸಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

2) ದಿನಾಂಕ:02–12–2023ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮದ ಬಗ್ಗೆ ಪ್ರೊ.ಕೆ. ಚಂದ್ರಶೇಖರ್‌ರವರ ವಿಷಯ ಸಂಖ್ಯೆ:2023–ಸಿಂ–7.20 (ಡಿ)(2)ರ ಬಗ್ಗೆ "ಕುಲಸಚಿವರು ಮಾಹಿತಿ ನೀಡಿ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಅಗತ್ಯಕ್ಕೆ ಅನುಗುಣವಾಗಿ ಅಧ್ಯಾಪಕರನ್ನು ಉಪಕುಲಸಚಿವರಾಗಿ ನಿಯೋಜಿಸಲಾಗುತ್ತದೆ. ಅವರಿಗೆ ಕಾಲಮಿತಿ ನಿಗದಿಪಡಿಸಲು ಆಗುವುದಿಲ್ಲ. ಆದಾಗ್ಯೂ, ಈ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು" ಎಂದು ನಿರ್ಣಯವಾಗಿರುವುದಕ್ಕೆ ಮಾನವ ಸಂಪನ್ಮೂಲ ನಿರ್ವಹಣೆ ವಿಭಾಗದಿಂದ ಕೈಗೊಂಡ ಕ್ರಮ "ಗಮನಿಸಲಾಯಿತು" ಎಂದು ನೀಡಿರುವುದನ್ನು ಸದಸ್ಯರಾದ ಶ್ರೀ ಬಿ.ಎನ್.ಶಶಿಧರ್‌ರವರು ಆಕ್ಷೇಪಿಸಿ ಮಾತನಾಡುತ್ತಾ, ಸಿಂಡಿಕೇಟ್ ನಿರ್ಣಯಕ್ಕೆ ಸಂಬಂಧಪಟ್ಟ ವಿಭಾಗದವರು ಕೈಗೊಂಡ ಕ್ರಮದ ಮಾಹಿತಿಯನ್ನು ದಾಖಲೆಗಳೊಂದಿಗೆ ವಿವರವಾಗಿ ಒದಗಿಸಬೇಕೇ ಹೊರತು "ಗಮನಿಸಲಾಯಿತು"/ ಪರಿಶೀಲಿಸಲಾಗುವುದು/ಕ್ರಮ ಕೈಗೊಳ್ಳಲಾಗುವುದು ಎಂದು ಒಂದೇ ಪದದಲ್ಲಿ ತಿಳಿಸುವುದು ಸರಿಯಾದ ಕ್ರಮವಲ್ಲ. ಸಕ್ಷಮ ಪ್ರಾಧಿಕಾರವಾದ ಸಿಂಡಿಕೇಟ್‌ಗಿಂತ ಆಡಳಿತಾತ್ಮಕ ವಿಭಾಗಗಳು ಮೇಲ್ಮಟ್ಟದವುಗಳಲ್ಲ ಎಂದರು.

ಕುಲಸಚಿವರು ಮಾತನಾಡಿ, ಮುಂದೆ ಈ ರೀತಿ ಆಗದಂತೆ ಎಲ್ಲಾ ವಿಭಾಗಗಳಿಗೆ ಮಾಹಿತಿ ನೀಡಲಾಗುವುದು ಎಂದರು.

ಮುಂದುವರೆದು ಮಾತನಾಡಿದ ಶ್ರೀ ಬಿ.ಎನ್.ಶಶಿಧರ್‌ರವರು ಒಂದೇ ವಿಭಾಗದಲ್ಲಿ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಹೆಚ್ಚಿನ ಅವಧಿಯಿಂದ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕೇತರ ನೌಕರರನ್ನು ಬದಲಾಯಿಸಬೇಕು ಎಂದರು. ಡಾ.ಅನಂತ್‌ರವರು ಮಾತನಾಡಿ ಎಲ್ಲಾ ನೌಕರರನ್ನು ಒಂದೇಬಾರಿಗೆ ವರ್ಗಾಯಿಸಿದಲ್ಲಿ ವಿಭಾಗಗಳ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತದೆ. ಅಲ್ಲದೇ, ಕೆಲವು ವಿಭಾಗಗಳಲ್ಲಿನ ಅನುಭವಿ ನೌಕರರನ್ನು ಉಳಿಸಿಕೊಳ್ಳಬೇಕು ಎಂದರು.

ಶ್ರೀ ಬಿ.ಎನ್. ಶಶಿಧರ್‌ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಮುಂಬಡ್ತಿ ಮತ್ತು ವರ್ಗಾವಣೆ ಕುರಿತಾಗಿ ಕೆಲವು ಸಮಸ್ಯೆಗಳಿವೆ. ಆದುದರಿಂದ ಮುಂಬಡ್ತಿ ಮತ್ತು ವರ್ಗಾವಣೆ ವಿಷಯಗಳ ಬಗ್ಗೆ ಚರ್ಚಿಸಿ ನಿರ್ಣಯ ತೆಗೆದುಕೊಳ್ಳುವ ಸಲುವಾಗಿ ವಿಶೇಷ ಸಿಂಡಿಕೇಟ್ ಸಭೆಯನ್ನು ಕರೆಯುವಂತೆ ಕೋರಿದರು. ಸಭೆ ಕರೆಯುವುದಾಗಿ ಮಾನ್ಯ ಕುಲಪತಿಯವರು ತಿಳಿಸಿದರು.

3) ವಿಷಯ ಸಂಖ್ಯೆ: 2024–ಸಿಂ–1.05(ಬಿ): 04 ಜನ ವಾಹನ ಚಾಲಕರಿಗೆ ಕಳೆದ 5 ತಿಂಗಳ ವೇತನ ಪಾವತಿಸುವ ಕುರಿತು.

**ಕೈಗೊಂಡ ಕ್ರಮ:** ವಾಹನ ಚಾಲಕರುಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡುವ ಬಗ್ಗೆ ಕರ್ನಾಟಕ ಸರ್ಕಾರ ಬೆಂಗಳೂರು ಸುತ್ತೋಲೆ ಸಂಖ್ಯೆ:ಆಇ 02 ಬಿಇಎಂ 2024 ಬೆಂಗಳೂರು, ದಿನಾಂಕ:07–06–2024ರನ್ವಯ ವಾಹನ ಚಾಲಕರನ್ನು ಖಾಲಿ ಇರುವ ಹುದ್ದೆಗಳ ಎದುರಾಗಿ ಹೊರ ಗುತ್ತಿಗೆ ಆಧಾರದ ಮೇಲೆ ಮಾತ್ರ ಭರ್ತಿ ಮಾಡುವುದು ಎಂದು ರಾಜ್ಯ ಸರ್ಕಾರದ ನೀತಿಯಾಗಿದೆ ಎಂದು ಆದೇಶಿಸಿರುವ ಹಿನ್ನೆಲೆಯಲ್ಲಿ ವಾಹನ ಚಾಲಕರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಸಿಂಡಿಕೇಟ್ ಗಮನಕ್ಕೆ ತರಲಾಗಿದೆ.

ಸದಸ್ಯರಾದ ಡಾ.ಅನಂತ್‌ರವರು ಮಾತನಾಡಿ, ವಾಹನ ಚಾಲಕರು ಬಹಳ ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದಾರೆ. ಅವರು ಈಗ ವೇತನಕ್ಕೆ ತಕ್ಕಂತೆ ಬದುಕು ಕಟ್ಟಿಕೊಂಡಿದ್ದಾರೆ. ಆದುದರಿಂದ ಹೊರಗುತ್ತಿಗೆ ಬದಲಾಗಿ ಸಂಚಿತ ವೇತನದಲ್ಲಿಯೇ ಮುಂದುವರೆಸಿ ಎಂದರು. ಶ್ರೀ ಶಶಿಧರ, ಬಿ.ಎನ್., ರವರು ಮಾತನಾಡಿ, ವಾಹನ ಚಾಲಕರು ಅತ್ಯಾವಶ್ಯಕ ಸೇವೆ ಅಡಿಯಲ್ಲಿ ವಿಶ್ವವಿದ್ಯಾಲಯದ ಶಾಸನಬದ್ಧ ಅಧಿಕಾರಿಗಳ ಚಾಲಕರಾಗಿದ್ದಾರೆ. ಅವರು ಮಂಜೂರಾಗಿ ಖಾಲಿ ಇರುವ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ರಾಜ್ಯದ ಬೇರೆ ವಿಶ್ವವಿದ್ಯಾಲಯಗಳಲ್ಲಿ ಕೂಡ ವಾಹನ ಚಾಲಕರಿಗೆ ಸಂಚಿತ ವೇತನ ಪಾವತಿಸುತ್ತಿದ್ದಾರೆ ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಈ ಬಗ್ಗ ಹಣಕಾಸು ಸಮಿತಿ ಸಭೆಯಲ್ಲಿ ಕೂಡ ಚರ್ಚೆಯಾಗಿದೆ. ಸಭೆಯಲ್ಲಿ ಚಾಲಕರ ವೇತನವನ್ನು ಆಂತರಿಕ ಸಂಪನ್ಮೂಲದಿಂದ ಪಾವತಿಸುತ್ತಿರುವುದಾಗಿ ತಿಳಿಸಿದ್ದು, ಆಂತರಿಕ ಸಂಪನ್ಮೂಲದಿಂದ ಪಾವತಿಸುವುದಾದರೆ ನಮ್ಮ ಆಕ್ಷೇಪಣೆ ಇಲ್ಲವೆಂದು ಹಣಕಾಸು ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ. ಆದುದರಿಂದ, ಚಾಲಕರು ಮಂಜೂರಾದ ಹುದ್ದೆಗಳಿಗೆ ಎದುರಾಗಿ ನೇಮಕಗೊಂಡಿದ್ದು, ಆಂತರಿಕ ಸಂಪನ್ಮೂಲದಿಂದ ವೇತನ ಪಾವತಿಸುತ್ತಿರುವುದಾಗಿ ಸರ್ಕಾರಕ್ಕೆ ಪತ್ರ ಬರೆದು ಮಂಜೂರಾತಿ ಪಡೆಯಬಹುದು ಎಂದರು. ಕುಲಸಚಿವರು ಮಾತನಾಡಿ, ಕುಲಸಚಿವ (ಮೌಲ್ಯಮಾಪನ)ರವರು ತಿಳಿಸಿರುವಂತೆ ಹಣಕಾಸು ಸಮಿತಿಯಲ್ಲಿ ಚರ್ಚೆ ಹಾಗೂ ನಿರ್ಣಯವಾಗಿರುವ ವಿವರ ಹಾಗೂ ರಾಜ್ಯದ ಬೇರೆ ವಿಶ್ವವಿದ್ಯಾಲಯಗಳಲ್ಲಿ ಆಗಿರುವ ಆದೇಶಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು

ಸಭೆಯು ಅವಲೋಕಿಸಿದ ಮೇಲ್ಕಂಡ ಅಂಶಗಳ ಕುರಿತು ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿ, ದಿನಾಂಕ:16–02–2024 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳನ್ನು ಸಭೆಯು ಅನುಮೋದಿಸಿತು.

**2024–ಸಿಂ–3.02:** ದಿನಾಂಕ:28–02–2024 ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳ ದೃಢೀಕರಣ.

ದಿನಾಂಕ:28–02–2024 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳಲ್ಲಿ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಈ ಕೆಳಕಂಡ ತಿದ್ದುಪಡಿಗಳನ್ನು ಮಾಡಲಾಯಿತು.

**ನಿರ್ಣಯ:** ವಿಷಯ ಸಂಖ್ಯೆ: 2024–ಸಿಂ–2.01(5.05.ಇ): ಸ್ನಾತಕ ಘಟಕ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕ ಹುದ್ದೆಯಿಂದ ಸಹ ಪ್ರಾಧ್ಯಾಪಕ ಹುದ್ದೆಗೆ ಹಾಗೂ ಸಹಾಯಕ ಪ್ರಾಧ್ಯಾಪಕರ ಎ.ಜಿ.ಪಿ. ಬದಲಾವಣೆಯ ವೃತ್ತಿ ಪದೋನ್ನತಿ (C.A.S) ಸಂಬಂಧದ B.O.A. ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಪಟ್ಟಂತೆ ಡಾ.ಮಹದೇವಸ್ವಾಮಿ, ಕೆ.ಎನ್., ಸಹಾಯಕ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ ಇವರು ಸಹಾಯಕ ಪ್ರಾಧ್ಯಾಪಕ ಹುದ್ದೆಯಿಂದ ಸಹ ಪ್ರಾಧ್ಯಾಪಕ ಹುದ್ದೆಗೆ ವೃತ್ತಿಪದೋನ್ನತಿ ಕೋರಿ ಅರ್ಜಿ ಸಲ್ಲಿಸಿದ್ದು, ಐ.ಕ್ಯೂ.ಎ.ಸಿ.ಯಿಂದ ಕೂಡ ಅದೇ ಹುದ್ದೆಗೆ ಮೌಲ್ಯಮಾಪನ ಮಾಡಿದೆ. ದಿನಾಂಕ:13–07–2023ರಂದು ನಡೆದ ಬಿ.ಓ.ಎ., ಸಭೆಯಲ್ಲಿ ಕೂಡ ಸಹಾಯಕ ಪ್ರಾಧ್ಯಾಪಕ ಹುದ್ದೆಯಿಂದ ಸಹ ಪ್ರಾಧ್ಯಾಪಕ ಹುದ್ದೆಗೆ ಸಂದರ್ಶನ ನಡೆಸಿ ಶಿಫಾರಸ್ಸು ಮಾಡಿದೆ. ಆದರೆ, ಬಿ.ಓ.ಎ. ಮತ್ತು ಸಿಂಡಿಕೇಟ್ ಸಭೆಯ ನಡಾವಳಿಯಲ್ಲಿ ಕಣ್ತಪ್ಪಿನಿಂದ ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ಎಂದು ನಮೂದಿಸಲಾಗಿದೆ. ಇವುಗಳನ್ನು ಪರಿಶೀಲಿಸಿದ ಸಭೆಯು ಬಿ.ಓ.ಎ. ನಡಾವಳಿ ಹಾಗೂ ದಿನಾಂಕ:28–02–2024ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿ ಸಂಖ್ಯೆ: 2024–ಸಿಂ–2.01(5.05.ಇ) ರಲ್ಲಿ ಈ ಕೆಳಗಿನಂತೆ ತಿದ್ದುಪಡಿ ಮಾಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

| ಅಧ್ಯಾಪಕರ ಹೆಸರು | ವಿಭಾಗ | ಪ್ರಸ್ತುತ ಹುದ್ದೆ | ವೃತ್ತಿ ಪದೋನ್ನತಿಗೆ ಪರಿಗಣಿಸಿರುವುದು | ಶಿಫಾರಸ್ಸು ಮಾಡಿದ ಅರ್ಹತಾ ದಿನಾಂಕ |
|---|---|---|---|---|
| ಡಾ. ಮಹದೇವಸ್ವಾಮಿ ಕೆ.ಎನ್. ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ | ಸಹಾಯಕ ಪ್ರಾಧ್ಯಾಪಕ | ಸಹ ಪ್ರಾಧ್ಯಾಪಕ | 21–02–2023 |

**ವಿಷಯ ಸಂಖ್ಯೆ: 2024–ಸಿಂ–2.01 (5.05.ಇ):** ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ವೃತ್ತಿ ಪದೋನ್ನತಿ (C.A.S) ಸಂಬಂಧದ B.O.A. ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

ಈ ವಿಷಯದ ನಿರ್ಣಯದಲ್ಲಿ "ವಿಶ್ವವಿದ್ಯಾಲಯದ ನೇರ ಆಡಳಿತಕ್ಕೊಳಪಟ್ಟ ಯು.ಎಸ್.ಎಂ.ಆರ್. ಪ್ರಥಮ ದರ್ಜೆ ಕಾಲೇಜು, ಶಂಕರಘಟ್ಟ ಇಲ್ಲಿನ ಈ ಕೆಳಕಂಡ ಅಧ್ಯಾಪಕರಿಗೆ ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ವೃತ್ತಿ ಪದೋನ್ನತಿ (C.A.S) ಸಂಬಂಧದ ದಿನಾಂಕ:13–07–2023ರಂದು ನಡೆದ B.O.A. ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು" ಎಂದು ನಮೂದಿಸಲಾಗಿದೆ.

ಸದರಿ ನಿರ್ಣಯವನ್ನು "ವಿಶ್ವವಿದ್ಯಾಲಯದ ನೇರ ಆಡಳಿತಕ್ಕೊಳಪಟ್ಟ ಯು.ಎಸ್.ಎಂ.ಆರ್. ಪ್ರಥಮ ದರ್ಜೆ ಕಾಲೇಜು, ಶಂಕರಘಟ್ಟ ಇಲ್ಲಿನ ಈ ಕೆಳಕಂಡ ಅಧ್ಯಾಪಕರಿಗೆ ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ವೃತ್ತಿ ಪದೋನ್ನತಿ (C.A.S) ಸಂಬಂಧದ ದಿನಾಂಕ:13–07–2023 ರಂದು ನಡೆದ B.O.A. ಸಭೆಯ ಶಿಫಾರಸ್ಸು ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು" ಎಂದು ತಿದ್ದುಪಡಿ ಮಾಡಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಮೇಲ್ಕಂಡ ತಿದ್ದುಪಡಿಗಳೊಂದಿಗೆ ದಿನಾಂಕ:28–02–2024 ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಸಭೆಯು ದೃಢೀಕರಿಸಿ ಅನುಮೋದಿಸಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

**2024-ಸಿಂ-3.02(ಎ):** ದಿನಾಂಕ:28-02-2024 ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳು.

**ನಿರ್ಣಯ:** ದಿನಾಂಕ:28-02-2024 ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳನ್ನು ಸಭೆಯು ಪರಾಮರ್ಶಿಸಿ ಅನುಮೋದಿಸಿತು.

**2024-ಸಿಂ-3.03:** ಸ್ನಾತಕ ಇಂಗ್ಲೀಷ್ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿರುವ ಕ್ರಮವನ್ನು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಸ್ಥಿರೀಕರಣದ ಕುರಿತು.

**ಚರ್ಚೆ:** ಸದಸ್ಯರಾದ ಶ್ರೀ ಶಶಿಧರ್ ಬಿ.ಎನ್. ರವರು ಮಾತನಾಡಿ ಈ ಹಿಂದಿನ ಸಿಂಡಿಕೇಟ್ ಸಭೆಗಳಲ್ಲಿ ತಿಳಿಸಿದ್ದಾಗ್ಯೂ ಹಲವಾರು ವಿಷಯಗಳನ್ನು ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಲಾಗುತ್ತಿದೆ. ತುರ್ತು ಸಂದರ್ಭ ಹೊರತುಪಡಿಸಿ ಉಳಿದ ಎಲ್ಲವನ್ನೂ ಸಿಂಡಿಕೇಟ್ ಅನುಮೋದನೆ ಪಡೆದುಕೊಂಡೇ ಅನುಷ್ಠಾನಗೊಳಿಸಬೇಕು ಎಂದರು. ಮುಂದುವರೆದು ಮಾತನಾಡಿದ ಅವರು ಕೆಲವು ಅಧ್ಯಯನ ಮಂಡಳಿಗಳಲ್ಲಿ ಹೊರ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರನ್ನು ಸದಸ್ಯರಾಗಿ ನೇಮಕ ಮಾಡಿದೆ. ನಮ್ಮ ರಾಜ್ಯದವರಿಗೆ ಆದ್ಯತೆ ನೀಡಿದರೆ ಒಳ್ಳೆಯದು ಎಂದರು. ಸದಸ್ಯರಾದ ಪ್ರೊ.ಎಸ್.ವಿ. ಕೃಷ್ಣಮೂರ್ತಿರವರು ಮಾತನಾಡಿ, ಬಹಳಷ್ಟು ಪ್ರಾಧ್ಯಾಪಕರು ವಯೋನಿವೃತ್ತಿ ಹೊಂದುತ್ತಿದ್ದು, ಕೆಲವು ವಿಷಯಗಳಿಗೆ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ತಜ್ಞರು ಲಭ್ಯವಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಹಾಗೂ ವಿಷಯ ತಜ್ಞರ ಅಗತ್ಯತೆಗೆ ಅನುಗುಣವಾಗಿ ವಿಶ್ವವಿದ್ಯಾಲಯದ ಅಧ್ಯಯನ ಮಂಡಳಿಯ ಅಧ್ಯಕ್ಷರು ಸಲ್ಲಿಸುವ ತಜ್ಞರ ಪಟ್ಟಿಯಿಂದ ಹೊರರಾಜ್ಯಗಳ ಪ್ರಾಧ್ಯಾಪಕರನ್ನು ಸದಸ್ಯರಾಗಿ ನೇಮಕ ಮಾಡಲಾಗುತ್ತಿದೆ ಎಂದರು. ಡಾ.ಸಣ್ಣಹನುಮಪ್ಪರವರು ಮಾತನಾಡಿ, ಎಲ್ಲಾ ಅಧ್ಯಯನ ಮಂಡಳಿಗಳ ಸದಸ್ಯರ ಸಂಖ್ಯೆ ಏಕರೂಪವಾಗಿಲ್ಲ. ಒಂದೇ ಸಂಖ್ಯೆ ನಿರ್ವಹಿಸಿ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ ಆಯಾ ವಿಷಯಗಳ Course of Subject ಪ್ರಕಾರ ಸದಸ್ಯರನ್ನು ನೇಮಕ ಮಾಡುವುದರಿಂದ ಸದಸ್ಯರ ಸಂಖ್ಯೆಯಲ್ಲಿ ವ್ಯತ್ಯಾಸವಾಗುತ್ತದೆ ಎಂದರು.

ಡಾ. ಅರುಣಾ ಎ. ರವರು ಮಾತನಾಡಿ ಅನುದಾನ ರಹಿತ ಖಾಸಗಿ ಕಾಲೇಜುಗಳಲ್ಲಿ ಕೂಡ ಅರ್ಹ ಹಾಗೂ ಅನುಭವಿ ಅಧ್ಯಾಪಕರಿದ್ದಾರೆ. ಅವರುಗಳನ್ನು ಕೂಡ ಅಧ್ಯಯನ ಮಂಡಳಿ ಹಾಗೂ ಪರೀಕ್ಷಾ ಮಂಡಳಿಗಳಿಗೆ ಪರಿಗಣಿಸಬೇಕು ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ ಖಾಸಗಿ ಅನುದಾನರಹಿತ ಕಾಲೇಜಿನ ಅಧ್ಯಾಪಕರನ್ನು ಕೂಡ ಪರೀಕ್ಷಾ ಮಂಡಳಿಯಲ್ಲಿ ಪರಿಗಣಿಸಲಾಗುತ್ತಿದೆ. ಕೆಲವು ಅಧ್ಯಾಪಕರು ಪರೀಕ್ಷಾ ಮಂಡಳಿಯ ಅಧ್ಯಕ್ಷರಾಗಿ ಕೂಡ ಕರ್ತವ್ಯ ನಿರ್ವಹಿಸಿದ್ದಾರೆ ಎಂದರು. ಡಾ. ಅರುಣಾ ಎ. ರವರು ಮುಂದುವರೆದು ಮಾತನಾಡಿ ಪರೀಕ್ಷಾ ಮಂಡಳಿಯ ರೀತಿಯಲ್ಲಿ ಅಧ್ಯಯನ ಮಂಡಳಿಗೂ ಪರಿಗಣಿಸಿ ಎಂದರು. ಕುಲಸಚಿವರು ಮಾತನಾಡಿ ಈ ಬಗ್ಗೆ ಅಧ್ಯಯನ ಮಂಡಳಿಯ ಅಧ್ಯಕ್ಷರುಗಳಿಗೆ ಮಾಹಿತಿ ನೀಡಲಾಗುವುದು ಎಂದರು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000 ಪ್ರಕರಣ 33(1) ಮತ್ತು (2) ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ-2018ರ ಅಧ್ಯಾಯ IV ಪ್ರಕರಣ (1) ಮತ್ತು (6)ರನ್ವಯ ಸ್ನಾತಕ ಇಂಗ್ಲೀಷ್ ಅಧ್ಯಯನ ಮಂಡಳಿಯನ್ನು ಮಾನ್ಯ ಕುಲಪತಿಯವರ ಅನುಮೋದನೆಯನ್ವಯ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

ಮುಂದುವರೆದು, ಇನ್ನು ಮುಂದೆ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದುಕೊಂಡು ಅಧ್ಯಯನ ಮಂಡಳಿ ರಚಿಸುವಂತೆ ನಿರ್ಣಯಿಸಲಾಯಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

**2024–ಸಿಂ–3.04:** ಸ್ನಾತಕೋತ್ತರ ಉರ್ದು ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿರುವ ಕ್ರಮವನ್ನು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಸ್ಥಿರೀಕರಣದ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000 ಪ್ರಕರಣ 33(1) ಮತ್ತು (2) ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ–2018ರ ಅಧ್ಯಾಯ IV ಪ್ರಕರಣ (1) ಮತ್ತು (6) ರನ್ವಯ ಸ್ನಾತಕೋತ್ತರ ಉರ್ದು ಅಧ್ಯಯನ ಮಂಡಳಿಯನ್ನು ಮಾನ್ಯ ಕುಲಪತಿಯವರ ಅನುಮೋದನೆಯನ್ವಯ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

**2024–ಸಿಂ–3.05:** ಸ್ನಾತಕ ಉರ್ದು ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿರುವ ಕ್ರಮವನ್ನು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಸ್ಥಿರೀಕರಣದ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000 ಪ್ರಕರಣ 33(1) ಮತ್ತು (2) ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ–2018ರ ಅಧ್ಯಾಯ IV ಪ್ರಕರಣ (1) ಮತ್ತು (6) ರನ್ವಯ ಸ್ನಾತಕ ಉರ್ದು ಅಧ್ಯಯನ ಮಂಡಳಿಯನ್ನು ಮಾನ್ಯ ಕುಲಪತಿಯವರ ಅನುಮೋದನೆಯನ್ವಯ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

**2024–ಸಿಂ–3.06:** ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿರುವ ಕ್ರಮವನ್ನು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಸ್ಥಿರೀಕರಣದ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000 ಪ್ರಕರಣ 33(1) ಮತ್ತು (2) ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ–2018 ರ ಅಧ್ಯಾಯ IV ಪ್ರಕರಣ (1) ಮತ್ತು (6) ರನ್ವಯ ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ಮಂಡಳಿಯನ್ನು ಮಾನ್ಯ ಕುಲಪತಿಯವರ ಅನುಮೋದನೆಯನ್ವಯ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

**2024–ಸಿಂ–3.07:** ಸ್ನಾತಕ ಸಂಸ್ಕೃತ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿರುವ ಕ್ರಮವನ್ನು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಸ್ಥಿರೀಕರಣದ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000 ಪ್ರಕರಣ 33(1) ಮತ್ತು (2) ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ–2018 ರ ಅಧ್ಯಾಯ IV ಪ್ರಕರಣ (1) ಮತ್ತು (6) ರನ್ವಯ ಸ್ನಾತಕ ಸಂಸ್ಕೃತ ಅಧ್ಯಯನ ಮಂಡಳಿಯನ್ನು ಮಾನ್ಯ ಕುಲಪತಿಯವರ ಅನುಮೋದನೆಯನ್ವಯ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

**2024–ಸಿಂ–3.08:** ಸ್ನಾತಕ ಭೂವಿಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿರುವ ಕ್ರಮವನ್ನು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಸ್ಥಿರೀಕರಣದ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000 ಪ್ರಕರಣ 33(1) ಮತ್ತು (2) ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ–2018 ರ ಅಧ್ಯಾಯ IV ಪ್ರಕರಣ (1) ಮತ್ತು (6) ರನ್ವಯ ಸ್ನಾತಕ ಭೂವಿಜ್ಞಾನ ಅಧ್ಯಯನ ಮಂಡಳಿಯನ್ನು ಮಾನ್ಯ ಕುಲಪತಿಯವರ ಅನುಮೋದನೆಯನ್ವಯ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

**2024–ಸಿಂ–3.09:** ಸ್ನಾತಕ ಜೈವಿಕ ತಂತ್ರಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿರುವ ಕ್ರಮವನ್ನು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಸ್ಥಿರೀಕರಣದ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000 ಪ್ರಕರಣ 33(1) ಮತ್ತು (2) ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ–2018 ರ ಅಧ್ಯಾಯ IV ಪ್ರಕರಣ (1) ಮತ್ತು (6) ರನ್ವಯ ಸ್ನಾತಕ ಜೈವಿಕತಂತ್ರಜ್ಞಾನ ಅಧ್ಯಯನ ಮಂಡಳಿಯನ್ನು ಮಾನ್ಯ ಕುಲಪತಿಯವರ ಅನುಮೋದನೆಯನ್ವಯ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

**2024–ಸಿಂ–3.10:** ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿರುವ ಕ್ರಮವನ್ನು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಸ್ಥಿರೀಕರಣದ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000 ಪ್ರಕರಣ 33(1) ಮತ್ತು (2) ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ–2018 ರ ಅಧ್ಯಾಯ IV ಪ್ರಕರಣ (1) ಮತ್ತು (6) ರನ್ವಯ ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಮಂಡಳಿಯನ್ನು ಮಾನ್ಯ ಕುಲಪತಿಯವರ ಅನುಮೋದನೆಯನ್ವಯ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

**2024–ಸಿಂ–3.11:** ಸ್ನಾತಕ ಸಸ್ಯಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿರುವ ಕ್ರಮವನ್ನು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಸ್ಥಿರೀಕರಣದ ಕುರಿತು.

**ನಿರ್ಣಯ:** ದಿನಾಂಕ:28–02–2024ರಂದು ನಡೆದ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ:2024–ಸಿಂ–2.12ರ ನಿರ್ಣಯದನ್ವಯ ಅಧ್ಯಯನ ಮಂಡಳಿಯ ಅಧ್ಯಕ್ಷರಿಂದ ಪರಿಷ್ಕೃತ ಪಟ್ಟಿ ಹಾಗೂ ಸ್ಪಷ್ಟೀಕರಣ ಪಡೆದುಕೊಂಡು, 2024–25ನೇ ಸಾಲಿನಿಂದ ರಾಜ್ಯ ಶಿಕ್ಷಣ ನೀತಿಯನ್ನು ಜಾರಿಗೊಳಿಸುವ ತುರ್ತು ಅಗತ್ಯ ಇದ್ದುದ್ದರಿಂದ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000 ಪ್ರಕರಣ 33(1) ಮತ್ತು (2) ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ–2018 ರ ಅಧ್ಯಾಯ IV ಪ್ರಕರಣ (1) ಮತ್ತು (6)ರನ್ವಯ ಸ್ನಾತಕ ಸಸ್ಯಶಾಸ್ತ್ರ ಅಧ್ಯಯನ ಮಂಡಳಿಯನ್ನು ಮಾನ್ಯ ಕುಲಪತಿಯವರ ಅನುಮೋದನೆಯನ್ವಯ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

**2024–ಸಿಂ–3.11(ಎ):** 34ನೇ ಘಟಿಕೋತ್ಸವ ಸಮಾರಂಭಕ್ಕೆ ಮುಖ್ಯ ಅತಿಥಿಗಳನ್ನು ಆಹ್ವಾನಿಸುವ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾಲಯದ 34ನೇ ವಾರ್ಷಿಕ ಘಟಿಕೋತ್ಸವಕ್ಕೆ ಮುಖ್ಯ ಅತಿಥಿಗಳನ್ನು ಆಹ್ವಾನಿಸುವ ಕುರಿತು ಚರ್ಚಿಸಿ ಪಟ್ಟಿಯನ್ನು ಸಿದ್ಧಪಡಿಸಿ ಅನುಮೋದಿಸಲಾಯಿತು ಹಾಗೂ ಈ ಬಗ್ಗೆ ಅಂತಿಮ ನಿರ್ಣಯ ತೆಗೆದುಕೊಳ್ಳಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

**2024–ಸಿಂ–3.11(ಬಿ):** ವಿಶ್ವವಿದ್ಯಾಲಯದ 34ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದ ಸಂದರ್ಭದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡಲು ಶೋಧನಾ ಸಮಿತಿಗೆ ತಜ್ಞರ ನೇಮಕದ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾಲಯದ 34ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡಲು ಅರ್ಹ ಗಣ್ಯರನ್ನು ಆಯ್ಕೆ ಮಾಡಲು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ–2000 ರ ಪ್ರಕರಣ 69ರನ್ವಯ ಘನತೆವೆತ್ತ ರಾಜ್ಯಪಾಲರಿಂದ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ರಚಿತವಾಗುವ ಶೋಧನಾ ಸಮಿತಿಗೆ ವಿಶ್ವವಿದ್ಯಾಲಯದಿಂದ ಒಬ್ಬ (ಪ್ರೊ. ಕೆ. ಚಿದಾನಂದಗೌಡ, ವಿಶ್ರಾಂತ ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ) ತಜ್ಞರನ್ನು ಆಯ್ಕೆ ಮಾಡಲಾಯಿತು.

ಮುಂದುವರೆದು, ವಿಶ್ವವಿದ್ಯಾಲಯದಿಂದ ಮಾನ್ಯ ಕುಲಾಧಿಪತಿಗಳಿಗೆ ಗೌರವ ಡಾಕ್ಟರೇಟ್‌ಗಾಗಿ ಗಣ್ಯರ ಅರ್ಜಿಗಳನ್ನು ನಿಯಮದ ಪ್ರಕಾರ ಸಿದ್ಧಪಡಿಸಿ ಸಲ್ಲಿಸಲು ಪ್ರೊ.ಎಸ್.ವಿ.ಕೃಷ್ಣಮೂರ್ತಿರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಸಮಿತಿಗೆ ಸಿಂಡಿಕೇಟ್ ಸದಸ್ಯರುಗಳಾದ ಡಾ. ಸಣ್ಣಹನುಮಪ್ಪ ಹಾಗೂ ಡಾ. ಅರುಣಾ ಎ. ಇವರುಗಳನ್ನು ಸದಸ್ಯರಾಗಿ ನೇಮಕ ಮಾಡಲಾಯಿತು.

**2024–ಸಿಂ–3.11(ಸಿ):** 2023–24ನೇ ಆರ್ಥಿಕ ವರ್ಷದ 36ನೇ ವಾರ್ಷಿಕ ವರದಿ ಅನುಮೋದಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ 2023–24ನೇ ಆರ್ಥಿಕ ವರ್ಷದ 36ನೇ ವಾರ್ಷಿಕ ವರದಿಯ ಕರಡು ಪ್ರತಿಯನ್ನು ಸಭೆಯು ಅನುಮೋದಿಸಿತು.

### ಹಣಕಾಸು ವಿಭಾಗ

**2024–ಸಿಂ–3.12:** 2023–24ನೇ ಆರ್ಥಿಕ ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

**ಚರ್ಚೆ:** ಹಣಕಾಸು ಸಮಿತಿ ಸಭೆಯ ನಡಾವಳಿಗಳಲ್ಲಿನ ವಿಷಯ ಸಂಖ್ಯೆ:2023–ಹಸ3:03 ರ ಕುರಿತು ಮಾತನಾಡಿದ ಶ್ರೀ ಬಿ. ಎನ್. ಶಶಿಧರ್‌ರವರು ಆರ್ಥಿಕ ಮಿತವ್ಯಯ ಸಾಧಿಸುವ ಸಲುವಾಗಿ ಹೆಚ್ಚುವರಿಯಾಗಿರುವ ಹೊರಗುತ್ತಿಗೆ ನೌಕರರು ಹಾಗೂ ಅತಿಥಿ ಉಪನ್ಯಾಸಕರ ಸಂಖ್ಯೆಯನ್ನು ಕಡಿತಗೊಳಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದರು. ಪ್ರೊ. ಎಸ್.ವಿ. ಕೃಷ್ಣಮೂರ್ತಿಯವರು ಮಾತನಾಡಿ, 2023–24ನೇ ಸಾಲಿನ ಅತಿಥಿ ಉಪನ್ಯಾಸಕರ ನೇಮಕದ ಸಂದರ್ಭದಲ್ಲಿಯೇ ಬಹಳಷ್ಟು ಕಡಿತಗೊಳಿಸಲಾಗಿದೆ. ಮುಂದಿನ ನೇಮಕಾತಿಯಲ್ಲಿ ಈ ಕುರಿತು ಕಟ್ಟುನಿಟ್ಟಿನ ಕ್ರಮ ವಹಿಸುವ ಅಗತ್ಯವಿದೆ ಎಂದರು. ಕುಲಸಚಿವ (ಮೌಲ್ಯಮಾಪನ) ರವರು ಮಾತನಾಡಿ ಹೊರಗುತ್ತಿಗೆ ನೌಕರರು ಹಾಗೂ ಅತಿಥಿ ಉಪನ್ಯಾಸಕರ ಸಂಖ್ಯೆಯನ್ನು ಕಡಿತಗೊಳಿಸಲು ಸರ್ಕಾರದಿಂದ ಕೂಡ ನಿರ್ದೇಶನ ಬಂದಿದೆ. ಅತಿಥಿ ಉಪನ್ಯಾಸಕರನ್ನು ಕಾರ್ಯಭಾರ ಹಾಗೂ ಅರ್ಹತೆ ಆಧರಿಸಿ ನೇಮಕ ಮಾಡಬೇಕು ಮತ್ತು ಹೊರಗುತ್ತಿಗೆ ನೌಕರರ ಸಂಖ್ಯೆಯನ್ನು ಕಡಿತಗೊಳಿಸಲು ಸರ್ಕಾರ ನಿಗದಿಪಡಿಸಿರುವ ಮಾನದಂಡ ಅನುಸರಿಸಬೇಕು ಎಂದರು. ಕುಲಸಚಿವರು ಮಾತನಾಡಿ, ಹೊರಗುತ್ತಿಗೆ ನೇಮಕದಲ್ಲಿ ರೋಸ್ಟರ್ ಅನುಸರಿಸುವಂತೆ ಸರ್ಕಾರದ ಆದೇಶ ಇದೆ ಎಂದರು. ಶ್ರೀ ಶಾಂತಕುಮಾರ್‌ರವರು ಮಾತನಾಡಿ ಹೊರಗುತ್ತಿಗೆ ನೌಕರರಿಗೆ ಅವರು ಕಾರ್ಯನಿರ್ವಹಿಸುತ್ತಿರುವ ಹುದ್ದೆಗೆ ಸರ್ಕಾರ ನಿಗದಿಪಡಿಸಿರುವ ಶೈಕ್ಷಣಿಕ ಅರ್ಹತೆಯನ್ನು ಕೂಡ ಪರಿಗಣಿಸಬೇಕಾಗುತ್ತದೆ ಎಂದರು.

**ನಿರ್ಣಯ:** ಚರ್ಚೆಯ ನಂತರ 2023–24ನೇ ಆರ್ಥಿಕ ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸಿದ ಸಭೆಯು ಸರ್ಕಾರದ ನಿರ್ದೇಶನದಂತೆ ಹಾಗೂ ಆರ್ಥಿಕ ಮಿತವ್ಯಯ ಸಾಧಿಸುವ ದೃಷ್ಟಿಯಿದ ಹೊರಗುತ್ತಿಗೆ ನೌಕರರು ಹಾಗೂ ಅತಿಥಿ ಉಪನ್ಯಾಸಕರ ಸಂಖ್ಯೆಯನ್ನು ಕಡಿತಗೊಳಿಸಲು ಕ್ರಮ ಕೈಗೊಳ್ಳಲು ನಿರ್ಣಯಿಸಿತು.

### ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ

**2024–ಸಿಂ–3.13:** ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರ ಮತ್ತು ಪ್ರಶಿಕ್ಷಕರುಗಳ ನೇಮಕಾತಿ ನವೀಕರಣಕ್ಕೆ ಸಂಬಂಧಿಸಿದಂತೆ ಶುಲ್ಕ ಪಾವತಿ ಕುರಿತು.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರ ಮತ್ತು ಪ್ರಶಿಕ್ಷಕರುಗಳ ನೇಮಕಾತಿ ನವೀಕರಣಕ್ಕೆ ಸಂಬಂಧಿಸಿದಂತೆ ಶುಲ್ಕ ಪಾವತಿ ಕುರಿತಾಗಿ ದಿನಾಂಕ:28–02–2024 ರಂದು ನಡೆದ ಸಿಂಡಿಕೇಟ್ ಸಭೆಯ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
-577 451

ನಿರ್ಣಯದಂತೆ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಿಗೆ ಪತ್ರ ಬರೆದು ಶುಲ್ಕ ವಿಧಿಸುತ್ತಿರುವ ಬಗ್ಗೆ ಮಾಹಿತಿ ಕೋರಲಾಗಿತ್ತು. ರಾಜ್ಯದ ಕೆಲವು ವಿಶ್ವವಿದ್ಯಾಲಯಗಳು ಮಾತ್ರ ಪತ್ರಿಸಿದ್ದು, ಶುಲ್ಕ ವಿಧಿಸುತ್ತಿಲ್ಲ ಎಂದು ಮಾಹಿತಿ ನೀಡಿದ್ದಾರೆ ಎಂದರು. ಪ್ರೊ. ಎಸ್.ವಿ. ಕೃಷ್ಣಮೂರ್ತಿಯವರು ಮಾತನಾಡಿ ನಾವು ಒದಗಿಸುವ ಸೇವೆಗೆ ಕಾಲೇಜಿನವರು ಶುಲ್ಕ ಭರಿಸಬೇಕು ಎಂದರು. ಸದಸ್ಯರಾದ ಶ್ರೀ ಬಿ.ಎನ್. ಶಶಿಧರ್‌ರವರು ಮಾತನಾಡಿ, ಪ್ರಾಂಶುಪಾಲರ ಮತ್ತು ಪ್ರಶಿಕ್ಷಕರುಗಳ ಹೊಸ ನೇಮಕಾತಿ ಹಾಗೂ ನವೀಕರಣಕ್ಕೆ ಸಲ್ಲಿಕೆಯಾಗುವ ಪ್ರಸ್ತಾವನೆಗಳನ್ನು ಶಿಕ್ಷಣ ನಿಕಾಯದ ಡೀನರು ಪರಿಶೀಲಿಸಿ ಅನುಮೋದನೆಗಾಗಿ ಕಾಲೇಜು ಅಭಿವೃದ್ಧಿಪರಿಷತ್ತಿನ ಮೂಲಕ ಕುಲಸಚಿವರಿಗೆ ಶಿಫಾರಸ್ಸು ಮಾಡಬೇಕು ಎಂದ ಅವರು ನವೀಕರಣ ಶುಲ್ಕ ಪಡೆಯದಿರುವುದು ಒಳಿತು ಎಂದರು.

**ನಿರ್ಣಯ:** ಚರ್ಚೆಯ ನಂತರ ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರ ಮತ್ತು ಪ್ರಶಿಕ್ಷಕರುಗಳ ಹೊಸ ನೇಮಕಾತಿಗಳ ಅನುಮೋದನೆಗೆ ಶುಲ್ಕ ಪಡೆಯಬೇಕು. ಆದರೆ, ನೇಮಕಾತಿ ನವೀಕರಣಕ್ಕೆ ಶುಲ್ಕ ಪಡೆಯುವ ಅಗತ್ಯವಿಲ್ಲ ಎಂದು ನಿರ್ಣಯಿಸಲಾಯಿತು.

**2024–ಸಿಂ–3.14:** 2024–25ನೇ ಸಾಲಿನ ಕಾಲೇಜುಗಳ ಸಂಯೋಜನಾ ವರದಿಗಳನ್ನು ಅನುಮೋದನೆಗಾಗಿ ಮಂಡಿಸುತ್ತಿರುವ ಕುರಿತು.

**ಚರ್ಚೆ:** ಯು.ಯು.ಸಿ.ಎಂ.ಎಸ್. ಮೂಲಕ ಕೈಗೊಳ್ಳಲಾದ 2024–25ನೇ ಸಾಲಿನ ಕಾಲೇಜುಗಳ ಸಂಯೋಜನಾ ವರದಿಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಪ್ರಕರಣ 59(9) ರ ಪ್ರಕಾರ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಕುಲಸಚಿವರು ಮಂಡಿಸಿದರು. ಸದಸ್ಯರಾದ ಶ್ರೀ ಶಶಿಧರ್ ಬಿ.ಎನ್. ರವರು ಮಾತನಾಡಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಪ್ರಕರಣ 59(6) ಪ್ರಕಾರ ಸ್ಥಳೀಯ ತಪಾಸಣಾ ಸಮಿತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸದಸ್ಯರು ಇರಬೇಕು ಮತ್ತು ಸ್ವೀಕರಿಸಲಾದ ಎಲ್ಲಾ ಅರ್ಜಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಬೇಕು. ಅಲ್ಲದೇ, ಸ್ಥಳೀಯ ತಪಾಸಣಾ ಸಮಿತಿಗೆ ಕೂಡ ಸಿಂಡಿಕೇಟ್ ಅನುಮೋದನೆ ಪಡೆದಿಲ್ಲ ಎಂದರು. ಸಭೆಗೆ ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಕಾಲೇಜು ಅಭಿವೃದ್ಧಿ ಪರಿಷತ್ತಿನ ನಿರ್ದೇಶಕರಾದ ಪ್ರೊ. ನಾಗರಾಜ ರವರು ಮಾತನಾಡಿ ಈ ಬಾರಿ ಸಂಯೋಜನೆಯನ್ನು ಸರ್ಕಾರದ ಆದೇಶದ ಪ್ರಕಾರ ಕಾಲಮಿತಿಯಲ್ಲಿ ಮುಗಿಸಬೇಕಾಗಿತ್ತು. ಅಲ್ಲದೆ, ಯು.ಯು.ಸಿ.ಎಂ.ಎಸ್. ನಲ್ಲಿದ್ದ ತಾಂತ್ರಿಕ ತೊಂದರೆಗಳಿಂದಾಗಿ ಬಿ.ಇಡಿ. ಫಲಿತಾಂಶ ಪ್ರಕಟಣೆ ವಿಳಂಬವಾದ ಹಿನ್ನೆಲೆಯಲ್ಲಿ ಸಂಯೋಜನೆಗೆ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ದಿನಾಂಕವನ್ನು ಪದೇ ಪದೇ ಮುಂದೂಡಬೇಕಾಯಿತು. ಸರ್ಕಾರದ ನಿರ್ದೇಶನದಂತೆ ಅರ್ಜಿ ಸ್ವೀಕೃತವಾದ ಕಾಲೇಜುಗಳ ತಪಾಸಣಾ ಪ್ರಕ್ರಿಯೆಯನ್ನು ಆರಂಭಿಸಲಾಯಿತು. ಈ ಎಲ್ಲ ಸಮಸ್ಯೆಗಳಿಂದಾಗಿ ಅರ್ಜಿಗಳನ್ನು ಸಿಂಡಿಕೇಟ್ ಅನುಮೋದನೆಗೆ ಮಂಡಿಸಲಾಗಲಿಲ್ಲ. ಸಂಯೋಜನೆಯ ಎಲ್ಲಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ, ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಪಡೆದುಕೊಂಡು ಸರ್ಕಾರಕ್ಕೆ ದಿನಾಂಕ:20–07–2024 ರೊಳಗೆ ಸಲ್ಲಿಸುವ ಅನಿವಾರ್ಯತೆ ಇದೆ. ಸಂಯೋಜನಾ ವರದಿಗಳನ್ನು ಈಗಾಗಲೇ ವಿದ್ಯಾವಿಷಯಕ ಪರಿಷತ್ತಿನ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದ್ದು ಸಿಂಡಿಕೇಟ್ ಅನುಮೋದನೆಗಾಗಿ ಮಂಡಿಸಿದೆ ಎಂದರು. ಕುಲಸಚಿವರು ಮಾತನಾಡಿ ಲೋಕಸಭಾ ಚುನಾವಣೆಯ ಮಾದರಿ ನೀತಿ ಸಂಹಿತೆ ಇದ್ದುದ್ದರಿಂದ ಸಿಂಡಿಕೇಟ್ ಸಭೆ ಕರೆಯಲಾಗಲಿಲ್ಲ. ನೀತಿ ಸಂಹಿತೆಯ ಪ್ರಕಾರ ಸರ್ಕಾರದ ನಾಮನಿರ್ದೇಶಿತ ಸದಸ್ಯರು ಸಭೆಯಲ್ಲಿ ಭಾಗವಹಿಸಲು ಅವಕಾಶವಿರಲಿಲ್ಲ. ಮುಂದಿನ ವರ್ಷದಲ್ಲಿ ಸದಸ್ಯರ ಸೂಚನೆಯಂತೆ ಅನುಮೋದನೆ ಪಡೆದು ಕ್ರಮವಹಿಸಲಾಗುವುದು ಎಂದರು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 59(9)ರನ್ವಯ ಸಂಯೋಜನಾ ಸಮಿತಿಗಳು ಸಲ್ಲಿಸಿರುವ ವಿಶ್ವವಿದ್ಯಾಲಯ ವ್ಯಾಪ್ತಿಯ ಕಾಲೇಜುಗಳ 2024–25ನೇ ಸಾಲಿನ ಸ್ಥಳೀಯ ತಪಾಸಣಾ ಸಮಿತಿಗಳ ಸಂಯೋಜನೆ ವರದಿಗಳನ್ನು



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಸಿಂಡಿಕೇಟ್ ಸಾಮಾನ್ಯ ಸಭೆಯು ಪರಿಶೀಲಿಸಿ ಸರ್ವಾನುಮತದಿಂದ ಅನುಮೋದಿಸಿತು.

## ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ

**2024–ಸಿಂ–3.15:** Learning Management System (LMS) Installation ಕುರಿತ ಸಮಿತಿ ಸಭೆಯ ನಡಾವಳಿ/ವರದಿಯನ್ನು ಮಂಡಿಸುತ್ತಿರುವ ಕುರಿತು.

**ನಿರ್ಣಯ:** ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ಪ್ರಾರಂಭಿಸಲಾಗಿರುವ ಆನ್‌ಲೈನ್ ಪದವಿ ಕೋರ್ಸುಗಳ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಚಟುವಟಿಕೆಗಳನ್ನು ಆನ್‌ಲೈನ್ ಮೂಲಕ ನೀಡುವ Learning Management System (LMS) Installation ಕುರಿತು ದಿನಾಂಕ: 24–04–2024ರಂದು ನಡೆದ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

**2024–ಸಿಂ–3.16:** Learning Management System (LMS) Installation ಕುರಿತ ಪ್ರಥಮ ಹಂತದ ಬಿಡ್ ಮೊತ್ತ ಮಂಜೂರಾತಿಯ ಪರಿಷ್ಕೃತ ಆದೇಶದ ಸ್ಥಿರೀಕರಣದ ಕುರಿತು.

**ನಿರ್ಣಯ:** ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ಪ್ರಾರಂಭಿಸಲಾಗಿರುವ ಆನ್‌ಲೈನ್ ಪದವಿ ಕೋರ್ಸುಗಳ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಚಟುವಟಿಕೆಗಳನ್ನು ಆನ್‌ಲೈನ್ ಮೂಲಕ ನೀಡುವ Learning Management System (LMS) ನ ಬಿಡ್‌ನ ಪರಿಷ್ಕೃತ ಮೊತ್ತ (ದರಸಂಧಾನದ ನಂತರ) ರೂ.96,00,000/– ಗಳಲ್ಲಿ (ರೂಪಾಯಿ ತೊಂಭತ್ತಾರು ಲಕ್ಷ ಮಾತ್ರ) ಒಡಂಬಡಿಕೆಯ ಪ್ರಕಾರ ಬಿಡ್‌ನ ಶೇ.60 ರಷ್ಟು ಮೊತ್ತ ಹಾಗೂ ಶೇ.18ರ ಜಿ.ಎಸ್.ಟಿ. ಮೊತ್ತ ಒಳಗೊಂಡಂತೆ M/s Pheme Software Pvt Ltd., Bangalore ಸಂಸ್ಥೆಯವರಿಗೆ ಪಾವತಿಸುವ ಸಂಬಂಧ ರೂ.67,96,500/– (ರೂಪಾಯಿ ಅರವತ್ತೇಳು ಲಕ್ಷದ ತೊಂಭತ್ತಾರು ಸಾವಿರದ ಐದು ನೂರು ಮಾತ್ರ) ಗಳಿಗೆ ಮೊದಲ ಕಂತಿನ ಮೊಬಲಗನ್ನು ಪಾವತಿಸಲು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಕಛೇರಿ ಆದೇಶ ಹೊರಡಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. ಹಾಗೂ ಸದರಿ ಸಿಂಡಿಕೇಟ್ ನಿರ್ಣಯದ ಕ್ರಮವು ಮುಂಬರುವ ಹಣಕಾಸು ಸಮಿತಿ ಸಭೆಯ ಅನುಮೋದನೆಗೊಳಪಟ್ಟಿರುತ್ತದೆ.

**2024–ಸಿಂ–3.17:** 2024–25ರ ಸಾಲಿನಿಂದ ಅನ್ವಯಿಸುವಂತೆ ದೂರಶಿಕ್ಷಣ ನಿರ್ದೇಶನಾಲಯದ ಆನ್‌ಲೈನ್ ಪದವಿ ಕೋರ್ಸುಗಳ ಪ್ರವೇಶಾತಿ ಶುಲ್ಕ ಪರಿಷ್ಕರಣೆ ಬಗ್ಗೆ.

**ನಿರ್ಣಯ:** ಚರ್ಚೆಯ ನಂತರ 2024–25ರ ಸಾಲಿನಿಂದ ಅನ್ವಯಿಸುವಂತೆ ದೂರಶಿಕ್ಷಣ ನಿರ್ದೇಶನಾಲಯದ 12 ಆನ್‌ಲೈನ್ ಪದವಿ ಕೋರ್ಸುಗಳ ಪ್ರವೇಶಾತಿ ಶುಲ್ಕ ಪರಿಷ್ಕರಣೆ ಪ್ರಸ್ತಾವನೆಯನ್ನು ಸಭೆಯು ಅನುಮೋದಿಸಿತು.

## ಶೈಕ್ಷಣಿಕ ವಿಭಾಗ

**2024–ಸಿಂ–3.18:** ಪಿಹೆಚ್.ಡಿ ಪರಿಷ್ಕೃತ ವಿನಿಯಮ–2024ನ್ನು ಅಳವಡಿಸಿಕೊಳ್ಳುವ ಬಗ್ಗೆ.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಜಾರಿಯಲ್ಲಿಯಲ್ಲಿರುವ ಪಿಹೆಚ್.ಡಿ. ವಿನಿಯಮ 2017 ನ್ನು ಪರಿಷ್ಕರಿಸಿ ಯು.ಜಿ.ಸಿ. ಜಾರಿಗೆ ತಂದಿರುವ Minimum standards and procedur for the Award of Ph. D. Regulation-2022 ನ್ನು ಅಳವಡಿಸಿಕೊಳ್ಳುವ ಸಲುವಾಗಿ ಸಿದ್ಧಪಡಿಸಿರುವ ಕರಡು ಪರಿಷ್ಕೃತ ಪಿಹೆಚ್.ಡಿ. ವಿನಿಯಮ–2024 ನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದರು. ಡಾ. ಸಣ್ಣಹನುಮಪ್ಪರವರು ಮಾತನಾಡಿ ಸಂಯೋಜಿತ ಕಾಲೇಜುಗಳಲ್ಲಿರುವ ಅರ್ಹ ಅಧ್ಯಾಪಕರು ಪಿಹೆಚ್.ಡಿ. ಗೈಡ್‌ಶಿಪ್ ನೀಡುವಂತೆ ಮಾನವಿ ಸಲ್ಲಿಸಿದ್ದಾರೆ. ಆದರೆ, ಇದಕ್ಕಾಗಿ ಕಾಲೇಜುಗಳಲ್ಲಿ ಸಂಶೋಧನಾ ಕೇಂದ್ರ ಇರಬೇಕು ಎಂಬ ಷರತ್ತು ಇದೆ. ಇದು ಕಷ್ಟವಾಗುತ್ತದೆ ಎಂದರು. ಡಾ. ವಿಷ್ಣುಮೂರ್ತಿಯವರು ಮಾತನಾಡಿ ಸರ್ಕಾರಿ ಕಾಲೇಜುಗಳ ಅಧ್ಯಾಪಕರು ಆಗಾಗ್ಗೆ ವರ್ಗಾವಣೆ ಹೊಂದುವುದರಿಂದ ಸಂಶೋಧನಾ ಕೇಂದ್ರವನ್ನು ಉಳಿಸಿಕೊಳ್ಳಲು ಕಷ್ಟವಾಗುತ್ತದೆ ಮತ್ತು ಸಂಶೋಧನಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂದರು. ಡಾ. ಅನಂತ್ ರವರು ಮಾತನಾಡಿ ಸರ್ಕಾರಿ ಕಾಲೇಜಿನ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಅಧ್ಯಾಪಕರು ವರ್ಗಾವಣೆಯಾದಾಗ್ಯೂ ಗೈಡ್‌ಶಿಪ್ ಮುಂದುವರೆಯುವಂತಾಗಬೇಕು ಎಂದರು. ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಶೋಧನಾ ಚಟುವಟಿಕೆಗಳು ನಡೆಯಬೇಕು. ಹೆಚ್ಚಿನ ಸಂಖ್ಯೆಯ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಆದರೆ ಕಾಲೇಜುಗಳಲ್ಲಿ ಸಂಶೋಧನಾ ಕಾರ್ಯಕ್ಕೆ ಅಗತ್ಯ ಮೂಲಭೂತ ಸೌಲಭ್ಯಗಳು ಬೇಕಾಗುತ್ತದೆ. ವಿಜ್ಞಾನದಲ್ಲಿ ಸಂಶೋಧನಾ ಪ್ರಯೋಗಾಲಯ ಬೇಕಾಗುತ್ತದೆ. ಅಧ್ಯಾಪಕರು ವರ್ಗಾವಣೆಯಾದ ಸ್ಥಳದಲ್ಲಿ ಸುಸಜ್ಜಿತ ಪ್ರಯೋಗಾಲಯ ಲಭ್ಯವಿಲ್ಲದಿದ್ದಲ್ಲಿ ವಿದ್ಯಾರ್ಥಿಗಳ ಸಂಶೋಧನೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಎಂದರು. ಡಾ. ಅರುಣಾ ಎ. ರವರು ಮಾತನಾಡಿ ವಿಶ್ವವಿದ್ಯಾಲಯದಲ್ಲಿನ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳನ್ನೇ ಸಂಶೋಧನಾ ಕೇಂದ್ರವನ್ನಾಗಿ ಪರಿಗಣಿಸಿ ಸರ್ಕಾರಿ ಕಾಲೇಜುಗಳ ಅರ್ಹ ಅಧ್ಯಾಪಕರನ್ನು ಪಿಹೆಚ್.ಡಿ. ಮಾರ್ಗದರ್ಶಕರಾಗಿ ಮಾನ್ಯತೆ ನೀಡಬಹುದು ಎಂದರು. ಸಣ್ಣಹನುಮಪ್ಪರವರು ಮಾತನಾಡಿ, ಈ ವ್ಯವಸ್ಥೆ ಜಾರಿಗೆ ತಂದರೆ ವಿದ್ಯಾರ್ಥಿಗಳಿಗೆ ಉತ್ತಮ ಗ್ರಂಥಾಲಯ ಮತ್ತು ಪ್ರಯೋಗಾಲಯಗಳ ಸೌಲಭ್ಯ ದೊರೆಯುತ್ತದೆ. ಆದುದರಿಂದ, ಪಿಹೆಚ್.ಡಿ. ವಿನಿಯಮದಲ್ಲಿ ಅಗತ್ಯ ತಿದ್ದುಪಡಿ ತರುವುದು ಉತ್ತಮ ಎಂದರು. ಪ್ರೊ. ಎಸ್.ವಿ. ಕೃಷ್ಣಮೂರ್ತಿರವರು ಮಾತನಾಡಿ ಸಂಯೋಜಿತ ಕಾಲೇಜುಗಳ ಪಿಹೆಚ್.ಡಿ. ಸಂಶೋಧನಾ ಕೇಂದ್ರ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಸಂಶೋಧನಾ ಗೈಡ್‌ಶಿಪ್ ನೀಡುವ ಸಂಬಂಧ ಪ್ರತ್ಯೇಕವಾದ ರೆಗ್ಯುಲೇಷನ್ ಮಾಡಬೇಕಾಗುತ್ತದೆ ಎಂದರು. ಈ ಕುರಿತು ಅಗತ್ಯ ಕ್ರಮ ಕೈಗೊಳ್ಳುವಂತೆ ಮಾನ್ಯ ಕುಲಪತಿಯವರು ಸೂಚಿಸಿದರು.

**ನಿರ್ಣಯ:** ಚರ್ಚೆಯ ನಂತರ ಪರಿಷ್ಕೃತ ಪಿಹೆಚ್.ಡಿ. ವಿನಿಯಮ–2024 ದ ಕರಡನ್ನು ಅನುಮೋದಿಸಿದ ಸಭೆಯು ಸಂಯೋಜಿತ ಕಾಲೇಜುಗಳ ಪಿಹೆಚ್.ಡಿ. ಸಂಶೋಧನಾ ಕೇಂದ್ರ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಸಂಶೋಧನಾ ಗೈಡ್‌ಶಿಪ್ ನೀಡುವ ಸಂಬಂಧ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ನಿರ್ಣಯಿಸಿತು.

**2024–ಸಿಂ–3.19:** 2024–25ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕ ಪದವಿಗಳ ಶುಲ್ಕಗಳ ಪರಿಷ್ಕರಣೆ ಮಾಡಿರುವ ಕುರಿತು.

**ಚರ್ಚೆ:** ಕುಲಸಚಿವ (ಮೌಲ್ಯಮಾಪನ) ರವರು ಮಾತನಾಡಿ, ಅಂಕಪಟ್ಟಿ, ಪದವಿ ಪ್ರಮಾಣ ಪತ್ರ ಇತ್ಯಾದಿ ದಾಖಲೆಗಳನ್ನು ಕಳೆದುಕೊಂಡ ವಿದ್ಯಾರ್ಥಿಗಳಿಗೆ ಪ್ರಸ್ತುತ ಡೂಪ್ಲಿಕೇಟ್ ಮಾರ್ಕ್ಸ್‌ಕಾರ್ಡ್, ಪದವಿ ಪ್ರಮಾಣ ಪತ್ರ ಮುಂತಾದವುಗಳನ್ನು ನೀಡಲಾಗುತ್ತಿದೆ. ಆದರೆ 'ಡೂಪ್ಲಿಕೇಟ್' (Duplicate) ಎಂಬ ಪದವನ್ನು ಬಳಸುವುದು ಸರಿಯಲ್ಲ. 'ಡೂಪ್ಲಿಕೇಟ್' ಎಂಬುದರ ಬದಲಾಗಿ 'ಸೆಕೆಂಡ್ ಒರಿಜಿನಲ್' (Second Origional) ಎಂದು ನೀಡಬಹುದು ಎಂದರು. ಎಲ್ಲಾ ಸದಸ್ಯರು ಇದಕ್ಕೆ ಸಮ್ಮತಿ ಸೂಚಿಸಿದರು.

**ನಿರ್ಣಯ:** ಚರ್ಚೆಯ ನಂತರ 2024–25ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕ ಪದವಿಗಳ ಶುಲ್ಕಗಳ ಪರಿಷ್ಕರಣೆ ಮಾಡಲು ಅನುಮೋದಿಸಿದ ಸಭೆಯು ಇನ್ನು ಮುಂದೆ ಅಂಕಪಟ್ಟಿ, ಪದವಿ ಪ್ರಮಾಣ ಪತ್ರ, ವರ್ಗಾವಣೆ ಪ್ರಮಾಣಪತ್ರ, ವಲಸೆ ಪ್ರಮಾಣ ಪತ್ರ ಇತ್ಯಾದಿ ದಾಖಲೆಗಳನ್ನು ಕಳೆದುಕೊಂಡ ವಿದ್ಯಾರ್ಥಿಗಳಿಗೆ ಪ್ರಸ್ತುತ ಅಂಕಪಟ್ಟಿ, ಪದವಿ ಪ್ರಮಾಣಪತ್ರ ಸೇರಿದಂತೆ ಎಲ್ಲಾ ದಾಖಲೆಗಳನ್ನು **'ಡೂಪ್ಲಿಕೇಟ್'** (Duplicate) ಎಂಬ ಪದದ ಬದಲಾಗಿ **'ಸೆಕೆಂಡ್ ಒರಿಜಿನಲ್'** (Second Origional) ಎಂದು ನಮೂದಿಸುವಂತೆ ಸರ್ವಾನುಮತದಿಂದ ನಿರ್ಣಯಿಸಲಾಯಿತು ಹಾಗೂ ಮಾನ್ಯ ಕುಲಪತಿಯವರ ಅನುಮೋದನೆಯನ್ವಯ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, 2024–25 ನೇ ಶೈಕ್ಷಣಿಕ ಸಾಲಿನಿಂದ ಎಲ್ಲಾ ಸ್ನಾತಕ ಪದವಿಗಳ ಪ್ರವೇಶಾತಿ ಶುಲ್ಕಗಳ ಪರಿಷ್ಕರಣೆ ಮಾಡಿರುವ ಕ್ರಮವನ್ನು ಸಭೆಯು ಅನುಮೋದಿಸಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

**2024–ಸಿಂ–3.20:** 2024–25ನೇ ಶೈಕ್ಷಣಿಕ ಸಾಲಿನಿಂದ ಎಲ್ಲಾ ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಶುಲ್ಕಗಳ ಪರಿಷ್ಕರಣೆ ಮಾಡಿರುವ ಕುರಿತು.

**ನಿರ್ಣಯ:** ಮಾನ್ಯ ಕುಲಪತಿಯವರ ಅನುಮೋದನೆಯನ್ವಯ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, 2024–25 ನೇ ಶೈಕ್ಷಣಿಕ ಸಾಲಿನಿಂದ ಎಲ್ಲಾ ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಶುಲ್ಕಗಳ ಪರಿಷ್ಕರಣೆ ಮಾಡಿರುವ ಕ್ರಮವನ್ನು ಸಭೆಯು ಅನುಮೋದಿಸಿತು.

**2024–ಸಿಂ–3.21:** ಸೆಂಟ್ರಲ್ ಕಾಫಿ ರೀಸರ್ಚ್ ಇನ್‌ಸ್ಟಿಟ್ಯೂಟ್, ಬಾಳೆಹೊನ್ನೂರು – ಈ ಸಂಸ್ಥೆಯ "ಅನ್ವಯಿಕ ಪ್ರಾಣಿಶಾಸ್ತ್ರ ಮತ್ತು ಅನ್ವಯಿಕ ಸಸ್ಯಶಾಸ್ತ್ರ" ವಿಭಾಗಗಳ ಸಂಶೋಧನಾ ಕೇಂದ್ರದ ಮಾನ್ಯತೆ ನವೀಕರಣ ಕುರಿತು.

**ನಿರ್ಣಯ:** ಕೇಂದ್ರೀಯ ಕಾಫಿ ಸಂಶೋಧನಾ ಕೇಂದ್ರ, ಬಾಳೆಹೊನ್ನೂರು, ಚಿಕ್ಕಮಗಳೂರು ಜಿಲ್ಲೆ ಇಲ್ಲಿನ ಅನ್ವಯಿಕ ಪ್ರಾಣಿಶಾಸ್ತ್ರ ಮತ್ತು ಅನ್ವಯಿಕ ಸಸ್ಯಶಾಸ್ತ್ರ ವಿಭಾಗಗಳ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ನವೀಕರಿಸಲು ವಿಶ್ವವಿದ್ಯಾಲಯದ ಪರಿನಿಯಮಗಳ ಪ್ರಕರಣ 08(1) ರ ಪ್ರಕಾರ ಪರಿಶೀಲನಾ ಸಮಿತಿಯನ್ನು ರಚಿಸಲು ಈ ಕೆಳಕಂಡ ತಜ್ಞರನ್ನು ನಾಮನಿರ್ದೇಶನ ಮಾಡಲಾಯಿತು.

**ಅನ್ವಯಿಕ ಪ್ರಾಣಿಶಾಸ್ತ್ರ ವಿಭಾಗ:**

ಎ) ಡಾ. ನಾಗರಾಜ, ಪ್ರಾಧ್ಯಾಪಕರು, ಸ್ನಾತಕೋತ್ತರ ಅನ್ವಯಿಕ ಪ್ರಾಣಿಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
ಬಿ) ಡಾ. ಮಹಬೂಬ್ ಬಾಷ, ಪ್ರಾಧ್ಯಾಪಕರು, ಸ್ನಾತಕೋತ್ತರ ಪ್ರಾಣಿಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು.

**ಅನ್ವಯಿಕ ಸಸ್ಯಶಾಸ್ತ್ರ ವಿಭಾಗ:**

ಎ) ಡಾ. ರಾಜಾ ನಾಯಕ, ಪ್ರಾಧ್ಯಾಪಕರು, ಸ್ನಾತಕೋತ್ತರ ಅನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
ಬಿ) ಡಾ. ಎನ್. ಸತ್ಯನಾರಾಯಣ, ಪ್ರಾಧ್ಯಾಪಕರು, ಸ್ನಾತಕೋತ್ತರ ಜೀವವಿಜ್ಞಾನ (ಲೈಫ್‌ಸೈನ್ಸ್) ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ.

**2024–ಸಿಂ–3.22:** "Suresh N.P. Shivamogga Memorial Gold Medal" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ:** ದಾನಿಗಳಾದ **ಶ್ರೀಮತಿ ಅಂಬಿಕ ಎನ್.ಪಿ. ಶಿವಾಂಬಿಕ, 2ನೇ ಮುಖ್ಯ ರಸ್ತೆ, 6ನೇ ತಿರುವು, ಕೃಷಿನಗರ, ಶಿವಮೊಗ್ಗ ಇವರು** ಕುವೆಂಪು ವಿಶ್ವವಿದ್ಯಾಲಯದ ಮಟ್ಟದಲ್ಲಿ ಸ್ನಾತಕ ಬಿ.ಎ. (ಇತಿಹಾಸ, ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರ) ಕಲಾ ಪದವಿ (ರೆಗ್ಯುಲರ್) ಅಧ್ಯಯನದಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿಗೆ "Suresh, N.P. Shivamogga Memorial Gold Medal" ಹೆಸರಿನಲ್ಲಿ ವಿಶ್ವವಿದ್ಯಾಲಯದ 34 ನೇ ಘಟಿಕೋತ್ಸವದಿಂದ ಸ್ವರ್ಣ ಪದಕ ನೀಡಲು ಅನುಮೋದನೆ ನೀಡಿದ ಸಭೆಯು ಪದಕದ ದಾನಿಗಳನ್ನು ಸರ್ವಾನುಮತದಿಂದ ಅಭಿನಂದಿಸಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2024–ಸಿಂ–3.23:** ಶಾಲಾ ಪರಿಕಲ್ಪನೆಯ ಶಾಲೆಗಳಿಗೆ ನಿರ್ದೇಶಕರನ್ನು ನೇಮಿಸುವ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಗಳ ಸಿ.ಬಿ.ಸಿ.ಎಸ್. ರೆಗ್ಯುಲೇಶನ್ ಪ್ರಕಾರ ಅವಧಿ ಮುಗಿದಿರುವ ಸ್ಕೂಲ್ ನಿರ್ದೇಶಕರ ಸ್ಥಾನಕ್ಕೆ ಹೊಸ ನಿರ್ದೇಶಕರನ್ನು ಸರದಿ ಹಾಗೂ ಜೇಷ್ಠತೆ ಆಧಾರದಲ್ಲಿ ಈ ಕೆಳಗಿನಂತೆ ನೇಮಕ ಮಾಡಲು ಅನುಮೋದಿಸಲಾಯಿತು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

| | | |
|---|---|---|
| 1 | ಡಾ. ಯೋಗೇಂದ್ರ<br>ಪ್ರಾಧ್ಯಾಪಕರು, ಪರಿಸರ ವಿಜ್ಞಾನ ಅಧ್ಯಯನ ವಿಭಾಗ | School of Earth Resources and Environmental Sciences |
| 2 | ಡಾ. ರಾಜಾನಾಯಕ<br>ಪ್ರಾಧ್ಯಾಪಕರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ | School of Bio Sciences |
| 3 | ಡಾ. ಎಸ್.ಎಸ್. ಪಾಟೀಲ್<br>ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ | School of Education |

**2024–ಸಿಂ–3.24:** ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರುಗಳನ್ನು ನೇಮಕ ಮಾಡುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ವಿಭಾಗಾಧ್ಯಕ್ಷರ ಅವಧಿ ಮುಗಿದಿರುವ ವಿಭಾಗಗಳಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ–2000 ಪ್ರಕರಣ 34(7) ಅನ್ವಯ ಸರದಿ ಹಾಗೂ ಜೇಷ್ಠತೆ ಆಧಾರದಲ್ಲಿ ಈ ಕೆಳಗಿನಂತೆ ಅಧ್ಯಕ್ಷರನ್ನು ನೇಮಕ ಮಾಡಲು ಅನುಮೋದಿಸಲಾಯಿತು.

| | | |
|---|---|---|
| 1 | ಡಾ. ಪದ್ಮಮ್ಮ ಎಸ್.<br>ಪ್ರಾಧ್ಯಾಪಕರು. | ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ |
| 2 | ಡಾ. ಜೆ. ನಾರಾಯಣ<br>ಪ್ರಾಧ್ಯಾಪಕರು. | ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ವಿಭಾಗ |
| 3 | ಡಾ. ನಾಗರಾಜ<br>ಪ್ರಾಧ್ಯಾಪಕರು. | ಸ್ನಾತಕೋತ್ತರ ಅನ್ವಯಿಕ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ |

**2024–ಸಿಂ–3.25:** ವಿಶ್ವವಿದ್ಯಾಲಯದ ವಕೀಲರ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡುತ್ತಾ ಕರ್ನಾಟಕ ರಾಜ್ಯ ಉಚ್ಚನ್ಯಾಯಾಲಯದಲ್ಲಿ ಪ್ರಕರಣಗಳು ದಾಖಲಾಗುತ್ತಿದ್ದು, ಅವುಗಳನ್ನು ನಿರ್ವಹಿಸಲು ತಜ್ಞ ವಕೀಲರ ಅಗತ್ಯವಿದ್ದುದ್ದರಿಂದ, ಸೇವಾ ವಿಷಯಗಳಲ್ಲಿ ಅನುಭವ ಹಾಗೂ ಪರಿಣಿತಿ ಹೊಂದಿರುವ ಶ್ರೀ ರಾಘವೇಂದ್ರ ಕಟ್ಟೀಮನಿ, ವಕೀಲರು, ಬೆಂಗಳೂರು ಇವರನ್ನು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ವಿಶ್ವವಿದ್ಯಾಲಯದ ವಕೀಲರ ಪಟ್ಟಿಗೆ ಸೇರ್ಪಡೆಗೊಳಿಸಿ ಆದೇಶ ಹೊರಡಿಸಿರುವ ಕ್ರಮವನ್ನು ಸಭೆಯ ಅನುಮೋದನೆ ಹಾಗೂ ಸ್ಥಿರೀಕರಣಕ್ಕಾಗಿ ಮಂಡಿಸಿದೆ ಎಂದರು. ಸದಸ್ಯರಾದ ಡಾ. ಅನಂತ್ ರವರು ಮಾತನಾಡಿ, ಈವರೆಗೆ ವಿಶ್ವವಿದ್ಯಾಲಯ ಅನುಮೋದಿಸಿರುವ ಎಲ್ಲಾ ವಕೀಲರ ಪಟ್ಟಿ, ಪ್ರಸ್ತುತ ಹೈಕೋರ್ಟ್ ಹಾಗೂ ಇತರೆ ನ್ಯಾಯಾಲಯಗಳಲ್ಲಿ ಇರುವ ಪ್ರಕರಣಗಳು ಎಷ್ಟು, ಅವುಗಳ ಸಧ್ಯದ ಸ್ಥಿತಿಗತಿ ಏನು ಮತ್ತು ನಿವೃತ್ತ ನ್ಯಾಯಾಧೀಶರ ಸಮಿತಿಗಳು ನಡೆಸುತ್ತಿರುವ ವಿಚಾರಣೆಗಳು ಎಷ್ಟು ಎಂಬ ಮಾಹಿತಿಯನ್ನು ಮುಂದಿನ ಸಿಂಡಿಕೇಟ್ ಸಭೆಗೆ ಒದಗಿಸಿ ಎಂದರು.

**ನಿರ್ಣಯ:** ಚರ್ಚೆಯ ನಂತರ ಶ್ರೀ ರಾಘವೇಂದ್ರ ಕಟ್ಟೀಮನಿ, ವಕೀಲರು, ಬೆಂಗಳೂರು ಇವರನ್ನು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ವಿಶ್ವವಿದ್ಯಾಲಯದ ವಕೀಲರ ಪಟ್ಟಿಗೆ ಸೇರ್ಪಡೆಗೊಳಿಸಿ ಆದೇಶ ಹೊರಡಿಸಿರುವ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು ಹಾಗೂ ಸದಸ್ಯರು ಕೇಳಿರುವ ಮಾಹಿತಿಯನ್ನು ಮುಂದಿನ ಸಭೆಗೆ ಒದಗಿಸಲು ನಿರ್ಣಯಿಸಿತು.

**2024–ಸಿಂ–3.26:** 2024–25ನೇ ಸಾಲಿನಲ್ಲಿ ವಯೋ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾಲಯದ ನೇರ ಆಡಳಿತಕ್ಕೊಳಪಟ್ಟ ವಿಶ್ವವಿದ್ಯಾಲಯ ಶ್ರೀಮದ್ ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಶಂಕರಘಟ್ಟ ಇಲ್ಲಿನ ಈ ಕೆಳಕಂಡ ಅಧ್ಯಾಪಕರುಗಳಿಗೆ ಕೆ.ಸಿ.ಎಸ್.ಆರ್. ನಿಯಮ 95 ರ ಪ್ರಕಾರ 60 ನೇ ವಯಸ್ಸಿಗೆ ನಿವೃತ್ತಿ ಹೊಂದಲು ಮಾನ್ಯ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಕುಲಪತಿಯವರ ಅನುಮೋದನೆಯನ್ವಯ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಅಧಿಕೃತ ಜ್ಞಾಪನವನ್ನು ಹೊರಡಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

| ಕ್ರ. ಸಂ. | ಅಧ್ಯಾಪಕರ ಹೆಸರು ಮತ್ತು ಹುದ್ದೆ | ನಿವೃತ್ತಿ ದಿನಾಂಕ |
|---|---|---|
| 1 | ಡಾ. ಸಿ. ಚನ್ನಪ್ಪ, ಪ್ರಾಧ್ಯಾಪಕರು | 31-07-2024 |
| 2 | ಶ್ರೀ ಡಿ.ಜಿ. ವಿಶ್ವೇಶ್ವರಯ್ಯ, ಸಹ ಪ್ರಾಧ್ಯಾಪಕರು | 31-07-2024 |
| 3 | ಶ್ರೀ ಸುರೇಶ ಜಿ., ಸಹ ಪ್ರಾಧ್ಯಾಪಕರು | 31-07-2024 |

**2024–ಸಿಂ–3.27:** 2024–25ನೇ ಸಾಲಿನಲ್ಲಿ ವಯೋ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ. (ಡಾ. ವಸಂತಕುಮಾರ್ ಟಿ., ಸಹ ಪ್ರಾಧ್ಯಾಪಕರು, ಶ್ರೀಮದ್ ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಶಂಕರಘಟ್ಟ.)

**ನಿರ್ಣಯ:** ವಿಶ್ವವಿದ್ಯಾಲಯದ ನೇರ ಆಡಳಿತಕ್ಕೊಳಪಟ್ಟ ವಿಶ್ವವಿದ್ಯಾಲಯ. ಶ್ರೀಮದ್ ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಶಂಕರಘಟ್ಟ ಇಲ್ಲಿನ ಅಧ್ಯಾಪಕರಾದ ಡಾ. ವಸಂತಕುಮಾರ್ ಟಿ., ಸಹ ಪ್ರಾಧ್ಯಾಪಕರು, ಇವರಿಗೆ ಕೆ.ಸಿ.ಎಸ್.ಆರ್. ನಿಯಮ 95 ರ ಪ್ರಕಾರ 60 ನೇ ವಯಸ್ಸಿಗೆ ದಿನಾಂಕ:31–05–2024 ರಂದು ನಿವೃತ್ತಿ ಹೊಂದಲು ಮಾನ್ಯ ಕುಲಪತಿಯವರ ಅನುಮೋದನೆಯನ್ವಯ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಅಧಿಕೃತ ಜ್ಞಾಪನವನ್ನು ಹೊರಡಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2024–ಸಿಂ–3.28:** 2024–25ನೇ ಸಾಲಿನಲ್ಲಿ ವಯೋ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ. (ಶ್ರೀ ಹೊಳಿಯಪ್ಪ ಎಂ.ಜಿ. ಅಟೆಂಡರ್, ಕೆಳದಿ ವಸ್ತು ಸಂಗ್ರಹಾಲಯ ಮತ್ತು ಸಂಶೋಧನಾ ಕೇಂದ್ರ, ಕೆಳದಿ.)

**ನಿರ್ಣಯ:** ಕೆಳದಿ ವಸ್ತುಸಂಗ್ರಹಾಲಯ ಮತ್ತು ಸಂಶೋಧನಾ ಕೇಂದ್ರ, ಕೆಳದಿ, ಸಾಗರ ತಾಲ್ಲೂಕು ಇಲ್ಲಿನ, ಅಧ್ಯಾಪಕೇತರ ನೌಕರರಾದ ಶ್ರೀ ಹೊಳಿಯಪ್ಪ, ಎಂ.ಜಿ., ಅಟೆಂಡರ್ ಇವರಿಗೆ ಕೆ.ಸಿ.ಎಸ್.ಆರ್. ನಿಯಮ 95 ರ ಪ್ರಕಾರ 60 ನೇ ವಯಸ್ಸಿಗೆ ದಿನಾಂಕ:31–05–2024 ರಂದು ನಿವೃತ್ತಿ ಹೊಂದಲು ಮಾನ್ಯ ಕುಲಪತಿಯವರ ಅನುಮೋದನೆಯನ್ವಯ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಅಧಿಕೃತ ಜ್ಞಾಪನವನ್ನು ಹೊರಡಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2024–ಸಿಂ–3.29:** ಡಾ. ಎಂ. ಜಯಾನಂದ, ಹಿರಿಯ ಪ್ರಾಧ್ಯಾಪಕರು, ಹೈದ್ರಾಬಾದ್ ವಿಶ್ವವಿದ್ಯಾಲಯ ಇವರನ್ನು ಸಂದರ್ಶಕ ಪ್ರಾಧ್ಯಾಪಕರಾಗಿ ನೇಮಕ ಮಾಡಿರುವ ಆದೇಶವನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ಡಾ. ಎಂ. ಜಯಾನಂದ, ಹಿರಿಯ ಪ್ರಾಧ್ಯಾಪಕರು, ಹೈದ್ರಾಬಾದ್ ವಿಶ್ವವಿದ್ಯಾಲಯ, ಹೈದ್ರಾಬಾದ್ ಇವರನ್ನು ಮಾನ್ಯ ಕುಲಪತಿಯವರ ಅನುಮೋದನೆಯನ್ವಯ ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ JC Bose Fellow distinguished Visiting Professor ಆಗಿ ಸ್ನಾತಕೋತ್ತರ ಭೂವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ನೇಮಕ ಮಾಡಿ ಆದೇಶ ಹೊರಡಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿ ಅನುಮೋದಿಸಿತು.

**2024–ಸಿಂ–3.30:** ವೈದ್ಯಕೀಯ ಬಿಲ್ಲುಗಳ ಪರಿಶೀಲನೆ ಮತ್ತು ದೃಢೀಕರಣದ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಅಧ್ಯಾಪಕ ಮತ್ತು ಅಧ್ಯಾಪಕೇತರ ನೌಕರರು ಸರ್ಕಾರ ಮತ್ತು ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆದ ಬಿಲ್ಲುಗಳನ್ನು ಮರುಭರಿಕೆಗೆ ಪರಿಗಣಿಸಲು ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಬಿ.ಎ.ಎಂ.ಎಸ್. ವೈದ್ಯಾಧಿಕಾರಿಗಳಿಗೆ ರೂ.20,000/– (ರೂಪಾಯಿ ಇಪ್ಪತ್ತು ಸಾವಿರ ಮಾತ್ರ) ಗಳವರೆಗಿನ ವೈದ್ಯಕೀಯ ಬಿಲ್ಲುಗಳನ್ನು ಸಿ.ಜಿ.ಎಚ್.ಎಸ್. ನಿಯಮಾನುಸಾರ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಪರಿಶೀಲಿಸಲು ಮತ್ತು ದೃಢೀಕರಣದೊಂದಿಗೆ ಅರ್ಹತಾ ಮೊತ್ತ ನಮೂದಿಸಲು ಹಾಗೂ ವಿಶ್ವವಿದ್ಯಾಲಯದಲ್ಲಿ ಎಂ.ಬಿ.ಬಿ.ಎಸ್. ವಿದ್ಯಾರ್ಹತೆಯುಳ್ಳ ವೈದ್ಯಾಧಿಕಾರಿಗಳು ನೇಮಕವಾಗುವವರೆಗೆ ರೂ.20,000/- (ರೂಪಾಯಿ ಇಪ್ಪತ್ತು ಸಾವಿರ ಮಾತ್ರ) ಗಳಿಗಿಂತ ಹೆಚ್ಚಿನ ಮೊತ್ತದ ಬಿಲ್ಲುಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ/ಜಿಲ್ಲಾ ಸರ್ಜನ್ ರವರಿಗೆ ಪರಿಶೀಲನೆಗಾಗಿ ಕಳುಹಿಸಲು ನಿರ್ಣಯಿಸಲಾಯಿತು.

**2024-ಸಿಂ-3.31:** 2023-24 ನೇ ಶೈಕ್ಷಣಿಕ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಅತಿಥಿ ಉಪನ್ಯಾಸಕರುಗಳಿಗೆ ಸಂಭಾವನೆಯನ್ನು ನಿಗದಿಪಡಿಸುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಸ್ನಾತಕೋತ್ತರ ಕೇಂದ್ರ, ಕಡೂರು / ಚಿಕ್ಕಮಗಳೂರು ಹಾಗೂ ವಿಶ್ವವಿದ್ಯಾಲಯದ ಘಟಕ / ನೇರ ಆಡಳಿತಕ್ಕೊಳಪಡುವ ಕಾಲೇಜುಗಳಲ್ಲಿ ಹೆಚ್ಚುವರಿ ಕಾರ್ಯಭಾರಕ್ಕನುಗುಣವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಸರ್ಕಾರಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸಂಭಾವನೆಯನ್ನು ಹೆಚ್ಚಿಸಲು ಸರ್ಕಾರವು ಕ್ರಮ ಕೈಗೊಂಡಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ನಿರೀಕ್ಷಿಸಿ ದಿನಾಂಕ:16-02-2024 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಗೌರವಧನವನ್ನು ಪರಿಷ್ಕರಿಸಿ ಹೆಚ್ಚಿಸಲಾಗಿತ್ತು.

ದಿನಾಂಕ:04-03-2024 ರ ಸರ್ಕಾರಿ ಆದೇಶದಲ್ಲಿ ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ದಿನಾಂಕ: [illegible]-01-2024 ರಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಪರಿಷ್ಕೃತ ಸಂಭಾವನೆಯನ್ನು ಮಂಜೂರು ಮಾಡಿ ಆದೇಶಿಸಿರುತ್ತದೆ.

| ಕ್ರ. ಸಂ | ಸಲ್ಲಿಸಿರುವ ಸೇವಾವಧಿ ಮತ್ತು ಯು.ಜಿ.ಸಿ., ನಿಗದಿಪಡಿಸಿರುವ ವಿದ್ಯಾರ್ಹತೆ ಹೊಂದಿರುವವರಿಗೆ | ಒಟ್ಟು ಗೌರವಧನದ ಮೊತ್ತ |
|---|---|---|
| 1 | 5 ವರ್ಷಕ್ಕಿಂತ ಕಡಿಮೆ ಸೇವಾವಧಿ ಸಲ್ಲಿಸಿರುವವರಿಗೆ ಮತ್ತು ಯು.ಜಿ.ಸಿ. ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರುವವರಿಗೆ | 35,000/- |
| 2 | 5 ವರ್ಷಕ್ಕಿಂತ ಕಡಿಮೆ ಸೇವಾವಧಿ ಸಲ್ಲಿಸಿರುವವರಿಗೆ ಮತ್ತು ಯು.ಜಿ.ಸಿ. ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದವರಿಗೆ | 31,000/- |
| 3 | 5 ವರ್ಷದಿಂದ 10 ವರ್ಷಗಳ ಸೇವಾವಧಿ ಸಲ್ಲಿಸಿರುವವರಿಗೆ ಮತ್ತು ಯು.ಜಿ.ಸಿ. ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರುವವರಿಗೆ | 38,000/- |
| 4 | 5 ವರ್ಷದಿಂದ 10 ವರ್ಷಗಳ ಸೇವಾವಧಿ ಸಲ್ಲಿಸಿರುವವರಿಗೆ ಮತ್ತು ಯು.ಜಿ.ಸಿ. ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದವರಿಗೆ | 34,000/- |
| 5 | 10 ವರ್ಷದಿಂದ 15 ವರ್ಷಗಳ ಸೇವಾವಧಿ ಸಲ್ಲಿಸಿರುವವರಿಗೆ ಮತ್ತು ಯು.ಜಿ.ಸಿ. ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರುವವರಿಗೆ | 39,000/- |
| 6 | 10 ವರ್ಷದಿಂದ 15 ವರ್ಷಗಳ ಸೇವಾವಧಿ ಸಲ್ಲಿಸಿರುವವರಿಗೆ ಮತ್ತು ಯು.ಜಿ.ಸಿ. ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದವರಿಗೆ | 35,000/- |
| 7 | 15 ವರ್ಷಕ್ಕಿಂತ ಹೆಚ್ಚಿನ ಸೇವಾವಧಿ ಸಲ್ಲಿಸಿರುವವರಿಗೆ ಮತ್ತು ಯು.ಜಿ.ಸಿ. ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರುವವರಿಗೆ | 40,000/- |
| 8 | 15 ವರ್ಷಕ್ಕಿಂತ ಹೆಚ್ಚಿನ ಸೇವಾವಧಿ ಸಲ್ಲಿಸಿರುವವರಿಗೆ ಮತ್ತು ಯು.ಜಿ.ಸಿ. ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದವರಿಗೆ | 36,000/- |

ವಿಶ್ವವಿದ್ಯಾಲಯವು ದಿನಾಂಕ:16-02-2024 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಸರ್ಕಾರದ ಆದೇಶವನ್ನು ನಿರೀಕ್ಷಿಸಿ, ಸಂಭಾವನೆಯನ್ನು ಪರಿಷ್ಕರಿಸಿದೆ. ಪ್ರಸ್ತುತ, ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಅಧೀನದ ಕಾಲೇಜು ಶಿಕ್ಷಣ ಇಲಾಖೆಯು ದಿನಾಂಕ:04-03-2024 ರಂದು ಆದೇಶ ಹೊರಡಿಸಿರುವುದರಿಂದ, 2023-24 ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾಲಯದ ಸ್ನಾತಕ ಮತ್ತು ಸ್ನಾತಕೋತ್ತರ ಅತಿಥಿ ಉಪನ್ಯಾಸಕರುಗಳಿಗೆ ಪ್ರಸ್ತುತ ಪಾವತಿಸುತ್ತಿರುವ ಸಂಭಾವನೆಯನ್ನು ಸರ್ಕಾರದ ಆದೇಶದ ಪ್ರಕಾರ ಪರಿಷ್ಕರಿಸುವ ಕುರಿತು ಸಭೆಯ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ ಎಂದರು.

ಸದಸ್ಯರಾದ ಶ್ರೀ ಶಶಿಧರ ಬಿ.ಎನ್. ರವರು ಮಾತನಾಡಿ, 15 ವರ್ಷಕ್ಕಿಂತ ಹೆಚ್ಚಿನ ಸೇವಾ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಅವಧಿ ಹೊಂದಿರುವ ಅತಿಥಿ ಉಪನ್ಯಾಸಕರಿಗೆ ಸರ್ಕಾರ ನಿಗದಿ ಪಡಿಸಿರುವ ದರಗಳು ವಿಶ್ವವಿದ್ಯಾಲಯದ ದರಕ್ಕಿಂತ ಕಡಿಮೆ ಇದೆ. ಆದುದರಿಂದ, ಅವರುಗಳಿಗೆ ವಿಶ್ವವಿದ್ಯಾಲಯ ಈ ಹಿಂದೆ ನಿಗದಿಪಡಿಸಿದ್ದ ದರದಲ್ಲಿ ಸಂಭಾವನೆ ನೀಡಿದರೆ ಅನುಕೂಲವಾಗುತ್ತದೆ ಎಂದರು. ಕುಲಸಚಿವರು ಮಾತನಾಡಿ, ಸರ್ಕಾರ ನಿಗದಿಪಡಿಸಿರುವ ಸಂಭಾವನೆ ದರಗಳನ್ನೆ ವಿಶ್ವವಿದ್ಯಾಲಯ ಅಳವಡಿಸಿಕೊಂಡಿದ್ದು, ಅದಕ್ಕಿಂತ ಹೆಚ್ಚಿನ ದರ ಪಾವತಿಸಿದಲ್ಲಿ ಆಡಿಟ್ ಆಕ್ಷೇಪಣೆಯಾಗುತ್ತದೆ. ಆದುದರಿಂದ, ಸರ್ಕಾರ ನಿಗದಿಪಡಿಸಿರುವ ದರಗಳನ್ನೆ ಪಾವತಿಸಬೇಕು ಎಂದರು. ಮುಂದುವರೆದು ಮಾತನಾಡಿದ ಶ್ರೀ ಬಿ.ಎನ್. ಶಶಿಧರ್‌ರವರು, ವಿಶ್ವವಿದ್ಯಾಲಯದಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯ ಅತಿಥಿ ಉಪನ್ಯಾಸಕರಿದ್ದಾರೆ ಎಂಬ ದೂರುಗಳಿವೆ. ಆದುದರಿಂದ, ವಿಭಾಗ / ಕಾಲೇಜುವಾರು, ಎಷ್ಟು ಕಾರ್ಯಭಾರ ಇದೆ? ಎಷ್ಟು ಅಧ್ಯಾಪಕರ ಅಗತ್ಯವಿದೆ? ಎಷ್ಟು ಖಾಯಂ ಅಧ್ಯಾಪಕರಿದ್ದಾರೆ? ಮತ್ತು ಎಷ್ಟು ಜನ ಅತಿಥಿ ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂಬ ಸಂಪೂರ್ಣ ಮಾಹಿತಿಯನ್ನು ಮುಂದಿನ ಸಿಂಡಿಕೇಟ್ ಸಭೆಗೆ ಒದಗಿಸುವಂತೆ ಕೋರಿದರು. ಡಾ.ಅನಂತ್‌ರವರು ಮಾತನಾಡಿ, ಸರ್ಕಾರಿ ಕಾಲೇಜುಗಳಲ್ಲಿನ ಅತಿಥಿ ಉಪನ್ಯಾಸಕರು ಪ್ರತಿದಿನದ ಶೈಕ್ಷಣಿಕ ಕಾರ್ಯಚಟುವಟಿಕೆಗಳ ಕುರಿತಾಗಿ ಡೈರಿ ಬರೆಯುತ್ತಾರೆ. ಇದನ್ನು ಪ್ರಾಂಶುಪಾಲರು ಸಂಭಾವನೆ ಬಿಲ್ಲುಗಳನ್ನು ಪಾವತಿಸುವಾಗ ಪರಿಶೀಲಿಸುತ್ತಾರೆ. ಎ.ಜಿ. ಆಡಿಟ್ ನವರು ಕೂಡ ಎಲ್ಲಾ ಕಾಲೇಜುಗಳ ಅತಿಥಿ ಉಪನ್ಯಾಸಕರ ಡೈರಿಗಳನ್ನು ಪರಿಶೀಲಿಸಿದ್ದಾರೆ. ಆದುದರಿಂದ, ವಿಶ್ವವಿದ್ಯಾಲಯ ಹಾಗೂ ಘಟಕ ಕಾಲೇಜುಗಳ ಅತಿಥಿ ಉಪನ್ಯಾಸಕರು ಕೂಡ ಡೈರಿ ಬರೆಯುವ ವ್ಯವಸ್ಥೆಯನ್ನು ಜಾರಿಗೆ ತರಬೇಕು ಎಂದರು. ಪ್ರೊ. ಎಸ್.ವಿ. ಕೃಷ್ಣಮೂರ್ತಿರವರು ಮಾತನಾಡುತ್ತಾ, ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಲ್ಲಿನ ಶೈಕ್ಷಣಿಕ ಚಟುವಟಿಕೆಗಳು ವಿಭಿನ್ನವಾಗಿದ್ದು, ವಿಶ್ವವಿದ್ಯಾಲಯದವರು ಡೈರಿ ಬರೆಯುವ ಅಗತ್ಯವಿಲ್ಲ ಎಂದರು. ಸದಸ್ಯರಾದ ಸಣ್ಣಹನುಮಪ್ಪ ರವರು ಮಾತನಾಡಿ ಅತಿಥಿ ಉಪನ್ಯಾಸಕರ ಸೇವೆ ಎಲ್ಲಾ ಕಡೆ ಒಂದೇ ವಿಧವಾಗಿದ್ದು, ಡೈರಿ ಬರೆಯುವುದನ್ನು ಕಡ್ಡಾಯಗೊಳಿಸುವುದು ಅಗತ್ಯ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾಲಯದ ಅಧ್ಯಾಪಕರು ಹಾಗೂ ಅತಿಥಿ ಉಪನ್ಯಾಸಕರು Self Academic Audit ಮಾಡಿಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಡೈರಿ ಬರೆಯುವ ಪದ್ಧತಿ ಜಾರಿಗೆ ತರಬಹುದು ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ, ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರಿಗೆ ನಿಗದಿಪಡಿಸಿರುವ ದರದಲ್ಲಿ ಗೌರವ ಸಂಭಾವನೆಯನ್ನು ದಿನಾಂಕ:01-01-2024 ರಿಂದ ಅನ್ವಯವಾಗುವಂತೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳು, ಘಟಕ ನೇರ ಆಡಳಿತಕ್ಕೊಳಪಟ್ಟ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಪಾವತಿಸಲು ಅನುಮೋದಿಸಿದ ಸಭೆಯು, ಅತಿಥಿ ಉಪನ್ಯಾಸಕರು ಡೈರಿ ಬರೆಯುವ ಪದ್ಧತಿಯನ್ನು ಮುಂದಿನ ಶೈಕ್ಷಣಿಕ ಸಾಲಿನಿಂದಲೇ ಜಾರಿಗೆ ತರುವ ಕುರಿತು ಪರಿಶೀಲಿಸುವಂತೆ ಹಾಗೂ ಸದಸ್ಯರು ಕೋರಿರುವ ಮಾಹಿತಿಯನ್ನು ಮುಂದಿನ ಸಿಂಡಿಕೇಟ್ ಸಭೆಗೆ ಒದಗಿಸಬೇಕೆಂದು ನಿರ್ಣಯಿಸಿತು.

**2024-೩೦-3.31(ಎ):** ದಿ॥ ಕೆ.ವಿ. ನಾಗರಾಜ - ಇವರ ಕುಟುಂಬಕ್ಕೆ ಅನುಕಂಪ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ.

**ನಿರ್ಣಯ:** ದಿ॥ ಕೆ.ವಿ. ನಾಗರಾಜ - ಇವರ ಕುಟುಂಬಕ್ಕೆ ಅನುಕಂಪ ಆಧಾರದ ಮೇಲೆ ಉದ್ಯೋಗ ನೀಡುವ ವಿಷಯದಲ್ಲಿ ಕಾನೂನಾತ್ಮಕ ಅಂಶಗಳಿರುವುದರಿಂದ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ವಿವರಗಳು ಹಾಗೂ ದಾಖಲೆಗಳೊಂದಿಗೆ ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸುವಂತೆ ವಿಷಯವನ್ನು ಮುಂದೂಡಲಾಯಿತು.

**2024-೩೦-3.31(ಬಿ):** ಕುವೆಂಪು ವಿಶ್ವವಿದ್ಯಾಲಯಕ್ಕೆ NAAC and Infrastructure Consultant ನೇಮಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ, ವಿಶ್ವವಿದ್ಯಾಲಯಕ್ಕೆ ನ್ಯಾಕ್ ಸಮಿತಿ ಭೇಟಿ ಹಿನ್ನೆಲೆಯಲ್ಲಿ ಅಗತ್ಯ ಕೆಲಸಕಾರ್ಯಗಳು ಗುಣಮಟ್ಟದಲ್ಲಿ ಹಾಗೂ ಸಮರೋಪಾದಿಯಲ್ಲಿ ಆಗಬೇಕಾಗಿರುವ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಹಿನ್ನೆಲೆಯಲ್ಲಿ ಹಾಗೂ ಈ ಹಿಂದೆ ನ್ಯಾಕ್ ಪೀರ್ ಸಮಿತಿ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕಾರ್ಯನಿರ್ವಹಿಸಿರುವ ಅನುಭವ ಇರುವ ಶ್ರೀ ಶಿವಕುಮಾರ್ ಹಂಪಾಳಿ ಇವರನ್ನು ಹೊರಗುತ್ತಿಗೆ ಆಧಾರದಲ್ಲಿ ನ್ಯಾಕ್ ಕಾರ್ಯ ಪೂರ್ಣಗೊಳ್ಳುವವರೆಗೆ ಅಥವಾ ಒಂದು ವರ್ಷದ ಅವಧಿಗೆ NAAC and Infrastructure Consultant ಆಗಿ ನೇಮಕ ಮಾಡಿಕೊಳ್ಳಲು ಮತ್ತು ಅವರಿಗೆ ನಿವೃತ್ತಿ ಸಂದರ್ಭದಲ್ಲಿ ಪಡೆಯುತ್ತಿದ್ದ ವೇತನದಲ್ಲಿ ಪ್ರಸ್ತುತ ಪಡೆಯುತ್ತಿರುವ ನಿವೃತ್ತಿ ವೇತನದ ವ್ಯತ್ಯಾಸದ ಮೊಬಲಗನ್ನು ಮೀರದಂತೆ ಸಂಭಾವನೆ ಪಾವತಿಸಲು ಸಭೆಯು ನಿರ್ಣಯಿಸಿತು.

**2024–ಸಿಂ–3.31(ಸಿ):** ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಗೆ ನಿರ್ದೇಶಕರನ್ನು ನೇಮಕ ಮಾಡಿರುವ ಆದೇಶವನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ–2000 ಪ್ರಕರಣ 24 ರ ಪ್ರಕಾರ ಡಾ. ಅರ್ತೋಬ ನಾಯಕ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ ಇವರನ್ನು ವಿಶ್ವವಿದ್ಯಾಲಯದ ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಯ ನಿರ್ದೇಶಕರಾಗಿ ನೇಮಕ ಮಾಡಿದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2024–ಸಿಂ–3.31(ಡಿ):** ಡಾ. ಶುಭಾ ಮರವಂತೆ. ಕಾರ್ಯಕ್ರಮ ಸಂಯೋಜನಾಧಿಕಾರಿ ರಾಷ್ಟ್ರೀಯ ಸೇವಾ ಯೋಜನೆ, ಕುವೆಂಪು ವಿಶ್ವವಿದ್ಯಾಲಯ ಇವರಿಗೆ ದಿನಾಂಕ:31–05–2024 ರಿಂದ ದಿನಾಂಕ:05–06–2024 ರವರೆಗೆ ವೈಯಕ್ತಿಕ ಕಾರಣದಿಂದ ದುಬೈಗೆ ತೆರಳಲು ಅನುಮತಿಸಿರುವ ಕ್ರಮವನ್ನು ಸ್ಥಿರೀಕರಿಸುವ ಕುರಿತು.

**ಚರ್ಚೆ:** ಡಾ. ಶುಭಾ ಮರವಂತೆ, ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು (ನಿಯೋಜನೆ) ಹಾಗೂ ಕಾರ್ಯಕ್ರಮ ಸಂಯೋಜನಾಧಿಕಾರಿ ರಾಷ್ಟ್ರೀಯ ಸೇವಾ ಯೋಜನೆ, ಕುವೆಂಪು ವಿಶ್ವವಿದ್ಯಾಲಯ ಇವರು ದಿನಾಂಕ:31–05–2024 ರಿಂದ ದಿನಾಂಕ: 05–06–2024 ರ ವರೆಗೆ ವೈಯಕ್ತಿಕ ಕಾರಣದಿಂದ ದುಬೈಗೆ ತೆರಳಲು ಮಾನ್ಯ ಕುಲಪತಿಯವರ ಅನುಮೋದನೆಯನ್ವಯ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಅನುಮೋದನೆ ನೀಡಿರುವ ಕ್ರಮವನ್ನು ಸ್ಥಿರೀಕರಣಕ್ಕಾಗಿ ಕುಲಸಚಿವರು ಸಭೆಗೆ ಮಂಡಿಸಿದರು. ಸದಸ್ಯರಾದ ಡಾ. ಅನಂತ ರವರು ಮಾತನಾಡಿ ವಿಶ್ವವಿದ್ಯಾಲಯದ ಯಾವುದೇ ಅಧ್ಯಾಪಕ ಹಾಗೂ ಅಧ್ಯಾಪಕೇತರ ನೌಕರರು ವಿದೇಶಕ್ಕೆ ತೆರಳುವ ಪೂರ್ವದಲ್ಲಿ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದುಕೊಳ್ಳಬೇಕು. ಈ ರೀತಿ ಘಟನೋತ್ತರ ಅನುಮೋದನೆಗೆ ಮಂಡಿಸಬಾರದು ಎಂದರು. ಕುಲಸಚಿವರು ಮಾತನಾಡಿ ಅವರಿಗೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಮಾನ್ಯ ಕುಲಪತಿಯವರ ಅನುಮೋದನೆ ಪಡೆದುಕೊಂಡು ಅನುಮತಿ ನೀಡಲಾಗಿದೆ. ತುರ್ತು ಸಂದರ್ಭದಲ್ಲಿ ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ ಅನುಮತಿ ನೀಡಬೇಕಾಗುತ್ತದೆ ಎಂದರು. ಡಾ. ಅನಂತ್ ರವರು ಮಾತನಾಡಿ, ಸಾಮಾನ್ಯವಾಗಿ ವಿದೇಶ ಪ್ರಯಾಣವು ಸಾಕಷ್ಟು ಮುಂಚಿತವಾಗಿಯೇ ನಿಗದಿಯಾಗಿರುತ್ತದೆ. ಆದುದರಿಂದ ತುರ್ತು ಸಂದರ್ಭ ಹೊರತುಪಡಿಸಿ, ಉಳಿದಂತೆ ಸಿಂಡಿಕೇಟ್ ಅನುಮೋದನೆ ಪಡೆದುಕೊಂಡು ತೆರಳುವ ಬಗ್ಗೆ ಎಲ್ಲಾ ನೌಕರರ ಗಮನಕ್ಕಾಗಿ ಸುತ್ತೋಲೆ ಹೊರಡಿಸಬೇಕು ಎಂದರು.

**ನಿರ್ಣಯ:** ಚರ್ಚೆಯ ನಂತರ, ಡಾ. ಶುಭಾ ಮರವಂತೆ, ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು (ನಿಯೋಜನೆ) ಹಾಗೂ ಕಾರ್ಯಕ್ರಮ ಸಂಯೋಜನಾಧಿಕಾರಿ ರಾಷ್ಟ್ರೀಯ ಸೇವಾ ಯೋಜನೆ, ಕುವೆಂಪು ವಿಶ್ವವಿದ್ಯಾಲಯ ಇವರು ದಿನಾಂಕ:31–05–2024 ರಿಂದ ದಿನಾಂಕ:05–06–2024 ರ ವರೆಗೆ ವೈಯಕ್ತಿಕ ಕಾರಣದಿಂದ ದುಬೈಗೆ ತೆರಳಲು ಮಾನ್ಯ ಕುಲಪತಿಯವರ ಅನುಮೋದನೆಯನ್ವಯ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಅನುಮೋದನೆ ನೀಡಿರುವ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು ಹಾಗೂ ಇನ್ನು ಮುಂದೆ ವಿಶ್ವವಿದ್ಯಾಲಯದ ಅಧ್ಯಾಪಕ ಹಾಗೂ ಅಧ್ಯಾಪಕೇತರ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ನೌಕರರು ವೈಯಕ್ತಿಕ ಅಥವಾ ಅನ್ಯಕಾರ್ಯ ನಿಮಿತ್ತದ ಮೇರೆಗೆ ವಿದೇಶಕ್ಕೆ ತೆರಳುವ ಪೂರ್ವದಲ್ಲಿ ತುರ್ತು ಹಾಗೂ ಅನಿವಾರ್ಯ ಸಂದರ್ಭಗಳನ್ನು ಹೊರತುಪಡಿಸಿ ಉಳಿದ ಸಂದರ್ಭಗಳಲ್ಲಿ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯಬೇಕೆಂದು ನಿರ್ಣಯಿಸಲಾಯಿತು.

**2024–ಸಿಂ–3.31(ಇ):** ಪ್ರೊ. ಶರತ್ ಅನಂತಮೂರ್ತಿ, ಮಾನ್ಯ ಕುಲಪತಿಗಳು ಕುವೆಂಪು ವಿಶ್ವವಿದ್ಯಲಯ, ಶಂಕರಘಟ್ಟ ಇವರಿಗೆ ವಿದೇಶ ಪ್ರಯಾಣಕ್ಕೆ ಅನುಮತಿ ನೀಡುವ ಕುರಿತು.

**ನಿರ್ಣಯ:** ಡಾ. ಶರತ್ ಅನಂತಮೂರ್ತಿ, ಮಾನ್ಯ ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ– ಇವರು ದಿನಾಂಕ: 19–06–2024 ರಿಂದ 11–07–2024 ರವರೆಗೆ ಗಳಿಕೆ ರಜೆಯ ಮೇಲೆ ವೈಯಕ್ತಿಕ ಕಾರಣದಿಂದ ಕೆನಡಾ ದೇಶಕ್ಕೆ ತೆರಳುವ ಸಂಬಂಧ ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ, ಅನುಮತಿ ನೀಡಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2024–ಸಿಂ–3.31(ಎಫ್):** ಪ್ರಾಧ್ಯಾಪಕರ ಪಟ್ಟಿಗೆ ಅನುಮೋದನೆ ಕುರಿತು.

**ನಿರ್ಣಯ:** ಹೊರ ರಾಜ್ಯಗಳ ವಿಶ್ವವಿದ್ಯಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರ ವಿವರಗಳನ್ನು ಸೇರಿಸಿ ಪ್ರಾಧ್ಯಾಪಕರ ಪಟ್ಟಿಯನ್ನು ಅನುಮೋದನೆಗಾಗಿ ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸುವಂತೆ ವಿಷಯವನ್ನು ಮುಂದೂಡಲಾಯಿತು.

**2024–ಸಿಂ–3.31(ಜಿ):** ಶ್ರೀ ಪ್ರದೀಪ ಎಂ., ಸಹಾಯಕ ಪ್ರಾಧ್ಯಾಪಕ ಇವರಿಗೆ ವೇತನ ನಿಗದೀಕರಣಗೊಳಿಸಿ ಹೊರಡಿಸಿರುವ ಆದೇಶವನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ (ಎಸ್.ಟಿ ಬ್ಯಾಕ್‌ಲಾಗ್) ಹುದ್ದೆಗೆ ನೇಮಕಗೊಂಡಿರುವ ಶ್ರೀ ಪ್ರದೀಪ್ ಎಂ. ಇವರ ನೇಮಕಾತಿ ಸಂಬಂಧ ಮಾನ್ಯ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಪಿಟಿಷನ್ ನಂ.12299/2023 ರ ಅಂತಿಮ ತೀರ್ಪಿಗೆ ಒಳಪಟ್ಟು ಮತ್ತು ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ ಹಾಗೂ ಸದರಿಯವರು ಸಲ್ಲಿಸಿರುವ ಮುಚ್ಚಳಿಕೆಯಲ್ಲಿನ ಷರತ್ತಿಗೊಳಪಟ್ಟು, ಸದರಿಯವರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿ 41 ರ ಪ್ರಕಾರ ವೇತನ ನಿಗದೀಕರಣ ಆದೇಶ ಹೊರಡಿಸಲಾಗಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2024–ಸಿಂ–3.31(ಹೆಚ್):** ಕೆಳದಿ ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾ ಕೇಂದ್ರದ ನಿರ್ವಹಣೆ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ಸರ್ಕಾರದ ಆದೇಶ ಸಂಖ್ಯೆ:ಸಂಕಇ 144 ಕೆಎಂಯು 2003 ಬೆಂಗಳೂರು ದಿನಾಂಕ:23–08–2005 ಮೇರೆಗೆ ವಿಶ್ವವಿದ್ಯಾಲಯದ ಆದೇಶ ಸಂಖ್ಯೆ:ಕುವಿ: ಮಾಸನಿ–2:ಕೆವಸಮಿಸ:2006–07:7388: ದಿನಾಂಕ:27–01–2007 ರಲ್ಲಿ ವಿಶ್ವವಿದ್ಯಾಲಯದ ಆಡಳಿತಕ್ಕೆ ತೆಗೆದುಕೊಳ್ಳಲಾಗಿದೆ. ಸದರಿ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ 07 ಸಿಬ್ಬಂದಿಗಳಲ್ಲಿ 06 ಸಿಬ್ಬಂದಿಗಳು ಈಗಾಗಲೇ ನಿವೃತ್ತಿಯಾಗಿದ್ದು, ಪ್ರಸ್ತುತ ಒಬ್ಬ ನೌಕರರಾದ ಮಾಡಲರ್ ಕಂ ಗೈಡ್ ಇವರು ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ, ಕೆಳದಿ ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾ ಕೇಂದ್ರವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹಿಂದಿರುಗಿಸುವ ಕುರಿತು ದಿನಾಂಕ:28–02–2024 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ನಿರ್ಣಯವಾಗಿದೆ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಕೆಳದಿ ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾ ಕೇಂದ್ರವು ತುಂಬಾ ಉತ್ಕೃಷ್ಟವಾಗಿದ್ದು, ಅಲ್ಲಿ ಪ್ರಾಚೀನ ಕಾಲದ ತಾಳೆ ಗರಿಗಳು ಸೇರಿದಂತೆ ಅತ್ಯಮೂಲ್ಯವಾದ ಸಂಗ್ರಹಗಳಿವೆ. ಈ ಕೇಂದ್ರವು ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿಕೆಗಳಿಗೆ ಬಹಳ ಅನುಕೂಲವಾಗಲಿದ್ದು, ನ್ಯಾಕ್ ಸಮಿತಿ ಭೇಟಿಯ ಹಿನ್ನೆಲೆಯಲ್ಲಿ ಕೂಡ ವಿಶ್ವವಿದ್ಯಾಲಯಕ್ಕೆ ಅನುಕೂಲವಾಗುತ್ತದೆ. ಅದನ್ನು ನಮ್ಮಲ್ಲಿಯೇ ಉಳಿಸಿಕೊಳ್ಳಬೇಕಾಗಿದೆ. ಆದುದರಿಂದ, ಸದರಿ ಕೇಂದ್ರವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹಸ್ತಾಂತರಿಸುವ ಬದಲು ವಿಶ್ವವಿದ್ಯಾಲಯದಲ್ಲಿಯೇ ಮುಂದುವರೆಸಿಕೊಂಡು, ಶೈಕ್ಷಣಿಕ,



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಸಂಶೋಧನಾ ಮತ್ತು ಪ್ರವಾಸೋದ್ಯಮ ಕೇಂದ್ರವಾಗಿ ಅಭಿವೃದ್ಧಿಪಡಿಸಲು ಸರ್ಕಾರದಿಂದ ಅನುದಾನ ಪಡೆಯಲು ಪ್ರಯತ್ನಿಸಬಹುದು. ಸದರಿ ಕೇಂದ್ರದ ನಿರ್ವಹಣೆಗಾಗಿ ಒಬ್ಬ ಅರ್ಹ ಕ್ಯುರೇಟರ್ ರನ್ನು ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಂಡು ನಿರ್ವಹಿಸಬಹುದು ಎಂದರು.

**ನಿರ್ಣಯ:** ಚರ್ಚೆಯ ನಂತರ ಪ್ರಸ್ತುತ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಕೆಳದಿ ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾ ಕೇಂದ್ರವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹಿಂದಿರುಗಿಸುವ ಕುರಿತು ದಿನಾಂಕ:28-02-2024 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಆಗಿರುವ ನಿರ್ಣಯವನ್ನು ರದ್ದುಪಡಿಸಲು ನಿರ್ಣಯಿಸಿದ ಸಭೆಯು, ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿಕೆಗಳ ಹಿತದೃಷ್ಟಿಯಿಂದ ಹಾಗೂ ನ್ಯಾಕ್ ಸಮಿತಿ ಭೇಟಿಯ ಹಿನ್ನೆಲೆಯಲ್ಲಿ, ಸದರಿ ಕೇಂದ್ರವನ್ನು ವಿಶ್ವವಿದ್ಯಾಲಯದಲ್ಲಿಯೇ ಮುಂದುವರೆಸಿಕೊಂಡು ಹೋಗಲು ಹಾಗೂ ಕೇಂದ್ರದ ನಿರ್ವಹಣೆಯ ಕುರಿತು ಒಬ್ಬ ಕ್ಯುರೇಟರ್ ರನ್ನು ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಂಡು ನಿರ್ವಹಿಸಲು ಸರ್ವಾನುಮತದಿಂದ ನಿರ್ಣಯಿಸಿತು.

**2024–ಸಿಂ–3.31(ಐ):** ಬಡ್ತಿ ಹೊಂದಿದ ನೌಕರರುಗಳ ಸ್ಥಾನಪನ್ನ ಅವಧಿಯನ್ನು ಕಡಿಮೆ ಮಾಡುವ ಬಗ್ಗೆ.

**ಚರ್ಚೆ** ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕೇತರ ವೃಂದದಲ್ಲಿ ಮಂಜೂರಾದ ಹುದ್ದೆಗಳಿಗೆ ಮೈಸೂರು ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ (Cadre and Recruitment Rules) ನಿಯಮಾವಳಿಗಳನ್ನು ಅಳವಡಿಸಿಕೊಂಡು ಬಡ್ತಿಗಳನ್ನು ನೀಡಲಾಗುತ್ತಿದ್ದು, ಸದರಿ ವೃಂದ ಮತ್ತು ನೇಮಕಾತಿ (Cadre and Recruitment Rules) ನಿಯಮಾವಳಿಗಳನುಸಾರ ಬಡ್ತಿ ಹೊಂದಿದ ನೌಕರರುಗಳಿಗೆ ಒಂದು ವರ್ಷದ ಅವಧಿಯವರೆಗೆ ಸ್ಥಾನಪನ್ನ ಅವಧಿಯಾಗಿರುತ್ತದೆ. ಆದರೆ, ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ಹುದ್ದೆಗಳ ಉನ್ನತೀಕರಣಗೊಳಿಸಿ ನೀಡಲಾಗಿದ್ದ ಬಡ್ತಿಗಳನ್ನು ಹಿಂಪಡೆದಿರುವುದರಿಂದ, ಕೆಲವು ನೌಕರರಿಗೆ ಹಿಂಬಡ್ತಿಗೊಳಿಸಿರುವ ಬಡ್ತಿಗಳನ್ನು ಪರಿಷ್ಕರಿಸಿ ಎರಡು ಬಡ್ತಿಗಳನ್ನು ನೀಡಬೇಕಾಗುತ್ತದೆ. ಆದರೆ ಈ ಕುರಿತಾಗಿ ಸೇವಾ ವಿಷಯಗಳ ತಜ್ಞರೊಂದಿಗೆ ಚರ್ಚಿಸಿದ ಪ್ರಕಾರ ಏಕಕಾಲಕ್ಕೆ ಎರಡು ಬಡ್ತಿಗಳನ್ನು ನೀಡಲು ಕಾನೂನಿನಲ್ಲಿ ಅವಕಾಶವಿಲ್ಲ. ಈ ಹಿನ್ನೆಲೆಯಲ್ಲಿ ಅಂತಹವರಿಗೆ ಮೊದಲು ಒಂದು ಬಡ್ತಿ ನೀಡಿ, ಅವರಿಗೆ ಕಾನೂನಿನ ಅಡಿಯಲ್ಲಿ ಅವಕಾಶವಿದ್ದಲ್ಲಿ ನಂತರದ ಹುದ್ದೆಯ ಸ್ವತಂತ್ರ ಪ್ರಭಾರ ನೀಡಿ ನಿಯಮಾನುಸಾರ ಛಾರ್ಜ್ ಅಲೋಯನ್ಸ್ ನೀಡಲಾಗುವುದು. ಅವರ ಒಂದು ವರ್ಷದ ಅಧಿಕೃತ ಸ್ಥಾನಪನ್ನ ಅವಧಿಯನ್ನು 06 ತಿಂಗಳುಗಳಿಗೆ ಇಳಿಸಿ, 06 ತಿಂಗಳ ನಂತರ ಇನ್ನೊಂದು ಲಭ್ಯ ಮುಂಬಡ್ತಿ ನೀಡಲಾಗುವುದು. ಈ ಹಿನ್ನೆಲೆಯಲ್ಲಿ ಉನ್ನತೀಕರಣಗೊಳಿಸಿ ನೀಡಲಾಗಿದ್ದ ಬಡ್ತಿಗಳನ್ನು ಹಿಂಪಡೆದಿರುವುದರಿಂದ, 02 ಬಡ್ತಿಗಳು ಅನ್ಯಾಯವಾಗಿರುವ ನೌಕರರಿಗೆ ಮಾತ್ರ ಅನ್ವಯವಾಗುವಂತೆ ಮುಂದಿನ ಬಡ್ತಿಯ ಒಂದು ವರ್ಷದ ಅಧಿಕೃತ ಸ್ಥಾನಪನ್ನ ಅವಧಿಯನ್ನು 06 ತಿಂಗಳಿಗೆ ಇಳಿಸುವ ಸಲುವಾಗಿ ಅನುಮೋದನೆಗಾಗಿ ಮಂಡಿಸಿದೆ ಎಂದರು.

ಡಾ. ಅನಂತ್ ರವರು ಮಾತನಾಡಿ, ನೀಡಿದ್ದ ಬಡ್ತಿಗಳನ್ನು ಹಿಂಪಡೆಯುವ ಅವಶ್ಯಕತೆ ಇರಲಿಲ್ಲ. ಬಡ್ತಿಯ ದಿನಾಂಕಗಳನ್ನು ಪರಿಷ್ಕರಿಸಬಹುದಾಗಿತ್ತು. ಬಡ್ತಿ ಹಿಂಪಡೆಯುವಂತಹ ಮಹತ್ವದ ನಿರ್ಧಾರ ತೆಗೆದುಕೊಳ್ಳುವ ಮುನ್ನ ಸಿಂಡಿಕೇಟ್ ಅನುಮೋದನೆ ಪಡೆಯಬೇಕಾಗಿತ್ತು. ಕೆಲವು ನೌಕರರ ಎರಡು ಮುಂಬಡ್ತಿಗಳನ್ನು ಹಿಂಪಡೆದಿರುವುದರಿಂದ ಮತ್ತೆ ಬಡ್ತಿ ನೀಡುವ ಅವಶ್ಯಕತೆ ಇಲ್ಲ ಅವರಿಗೆ refixation ಮಾಡಬೇಕು ಅಷ್ಟೆ ಎಂದರು. ಶ್ರೀ ಶಶಿಧರ್ ಬಿ. ಎನ್. ರವರು ಮಾತನಾಡಿ, ಈಗ ಮುಂಬಡ್ತಿ ನೀಡಲು ಹೊರಟಿರುವುದು ಸಂತೋಷದ ಸಂಗತಿ, ಆದರೆ, ಮುಂದಿನ ದಿನಗಳಲ್ಲಿ ಹಿಂದಿನಂತೆ ತೊಂದರೆಗಳಾಗದಂತೆ ಸರ್ಕಾರದ ನಿಯಮಾನುಸಾರ ಪರಿಶೀಲಿಸಿ ಬಡ್ತಿ ನೀಡಲು ಕ್ರಮಕೈಗೊಳ್ಳಬೇಕು ಎಂದರು.

**ನಿರ್ಣಯ:** ಚರ್ಚೆಯ ನಂತರ, ಹುದ್ದೆಗಳನ್ನ ಉನ್ನತೀಕರಣಗೊಳಿಸಿ ನೀಡಲಾಗಿದ್ದ ಬಡ್ತಿಗಳನ್ನು, ಪರಿನಿಯಮ ಅನುಮೋದನೆಯಾಗದ ಕಾರಣದಿಂದ ಹಿಂಪಡೆದಿರುವುದರಿಂದ, ಸದರಿ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ನೌಕರರಿಗೆ ಹಿಂಬಡ್ತಿಗೊಳಿಸಿರುವ ಬಡ್ತಿಗಳನ್ನು ಪುನರ್ ವಿಮರ್ಶಿಸಲು ಅನುವಾಗುವಂತೆ ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ, ಹುದ್ದೆಗಳ ಉನ್ನತಿಕರಣ ಹಾಗೂ ಬಡ್ತಿಗಳನ್ನು ಹಿಂಪಡೆದಿರುವ ನೌಕರರುಗಳ ಪ್ರಕರಣಕ್ಕೆ ಮಾತ್ರ ಅನ್ವಯವಾಗುವಂತೆ ಇಂತಹ ಸ್ಥಾನಪನ್ನ ಅವಧಿಯನ್ನು ಒಂದು ವರ್ಷದ ಅವಧಿಯಿಂದ ಆರು ತಿಂಗಳಿಗೆ ಕಡಿತಗೊಳಿಸಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

**2024–ಸಿಂ–3.31(ಜೆ):** ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳು/ಘಟಕ ಕಾಲೇಜು/ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜುಗಳ ಕೆಲವು ಅಧ್ಯಾಪಕರುಗಳು ದಿನಾಂಕ:01–04–2006ರ ಪೂರ್ವದಲ್ಲಿನ ನೇಮಕಾತಿ ಅಧಿಸೂಚನೆಗಳ ಮೂಲಕ ಆಯ್ಕೆ ಹೊಂದಿದ್ದು, ಆ ದಿನಾಂಕದಂದು ಅಥವಾ ನಂತರದಲ್ಲಿ ರಾಜ್ಯ ಸರ್ಕಾರದ ಸೇವೆಗೆ ಸೇರಿದ ನೌಕರರನ್ನು ಹಳೆಯ ಡಿಫೈನ್ಡ್ ಪಿಂಚಣಿ ಯೋಜನೆಗೆ ಒಳಪಡಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಆಇ–ಪಿಇಎನ್:99:2023, ಬೆಂಗಳೂರು, ದಿನಾಂಕ:24–01–2024 ರ ಅನ್ವಯ ಕುವೆಂಪು ವಿಶ್ವವಿದ್ಯಾಲಯದಲ್ಲಿ ದಿನಾಂಕ:01–04–2006 ರ ಪೂರ್ವದಲ್ಲಿನ ನೇಮಕಾತಿ ಅಧಿಸೂಚನೆಗಳ ಮೂಲಕ ಆಯ್ಕೆ ಹೊಂದಿ ಆ ದಿನಾಂಕದಂದು ಅಥವಾ ತದನಂತರದಲ್ಲಿ ಸೇವೆಗೆ ಸೇರಿದ ನೌಕರರುಗಳನ್ನು ಹಳೆಯ ಡಿಫೈನ್ಡ್ ಪಿಂಚಣಿ ಯೋಜನೆ ವ್ಯಾಪ್ತಿಗೆ ಒಳಪಡಿಸುವ ಸಂಬಂಧ ಸರ್ಕಾರಿ ಆದೇಶದಲ್ಲಿನ ಷರತ್ತುಗಳಿಗೊಳಪಟ್ಟು, ನೌಕರನ ಆಯ್ಕೆಗೆ ಅನುಸಾರ ಅವರು ಹಿಂದಿನ ಡಿಫೈನ್ಡ್ ಪಿಂಚಣಿ ಯೋಜನೆಗೆ ಒಳಪಡಲು ನಿಗದಿತ ಅರ್ಹತೆಯನ್ನು ಹೊಂದಿರುವ ನೌಕರರುಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

## ಪರೀಕ್ಷಾ ವಿಭಾಗ

**2024–ಸಿಂ–3.32:** ದಿನಾಂಕ:19–01–2024 ಮತ್ತು 31–05–2024 ರಂದು ನಡೆದ ವಿದ್ಯಾರ್ಥಿಗಳ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸುವ ಕುರಿತು.

**ನಿರ್ಣಯ:** ಸೆಪ್ಟಂಬರ್/ಅಕ್ಟೋಬರ್–2023 ರಲ್ಲಿ ನಡೆದ ವಿಶ್ವವಿದ್ಯಾಲಯದ ರೆಗ್ಯುಲರ್ ಪದವಿ ಪರೀಕ್ಷೆಗಳಲ್ಲಿ ಅಕ್ರಮ ಎಸಗಿರುವ ವಿದ್ಯಾರ್ಥಿಗಳಿಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶರ ನೇತೃತ್ವದ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯಲ್ಲಿ ದಿನಾಂಕ:19–01–2024 ಮತ್ತು 31–05–2024 ರಂದು ವಿಚಾರಣೆ ನಡೆಸಲಾಗಿದ್ದು, ತಪ್ಪಿತಸ್ಥ ವಿದ್ಯಾರ್ಥಿಗಳಿಗೆ ದಂಡ ವಿಧಿಸಲಾಗಿದೆ. ಸದರಿ ವಿದ್ಯಾರ್ಥಿಗಳಿಗೆ ಮುಂದಿನ ದಿನಗಳಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅನುಕೂಲವಾಗುವಂತೆ ಸಮಿತಿಯ ನಡಾವಳಿಗಳಿಗೆ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ, ನಿರ್ಣಯ ಪತ್ರಗಳನ್ನು ವಿದ್ಯಾರ್ಥಿಗಳಿಗೆ ಈಗಾಗಲೇ ಕಳುಹಿಸಿಕೊಡಲಾಗಿರುವ ಹಿನ್ನೆಲೆಯಲ್ಲಿ ಸದರಿ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2024–ಸಿಂ–3.33:** ವಿಶ್ವವಿದ್ಯಾಲಯದ NEP & Non - NEP ಶಿಕ್ಷಣ ನೀತಿಯಡಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಪರೀಕ್ಷೆಗಳಿಗೆ ಸಂಬಂಧಿಸಿದ ವಿವಿಧ ಶುಲ್ಕಗಳನ್ನು ಪರಿಷ್ಕರಿಸುವ ಕುರಿತು.

**ನಿರ್ಣಯ:** NEP & Non - NEP ಶಿಕ್ಷಣ ನೀತಿಯಡಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ಅಂಕಪಟ್ಟಿ/ತಾತ್ಕಾಲಿಕ ಪ್ರಮಾಣ ಪತ್ರ/ ನೈಜತೆ ಪ್ರಮಾಣ ಪತ್ರ ಇತ್ಯಾದಿ ಶುಲ್ಕಗಳನ್ನು ಪರಿಷ್ಕರಿಸಿ ಹೆಚ್ಚಿಸುವ ಕುರಿತಾಗಿ ಚರ್ಚಿಸಿದ ಸಭೆಯು ರಾಜ್ಯದ ಬೇರೆ ವಿಶ್ವವಿದ್ಯಾಲಯಗಳಿಂದ ಶುಲ್ಕಗಳ ವಿವರ ಪಡೆದುಕೊಂಡು ಮುಂದಿನ ಸಭೆಯಲ್ಲಿ ಮಂಡಿಸುವಂತೆ ವಿಷಯವನ್ನು ಮುಂದೂಡಲಾಯಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

**2024-ಸಿಂ-3.34:** ದಿನಾಂಕ:28-05-2024 ಹಾಗೂ ದಿನಾಂಕ:29-05-2024 ರಂದು ನಡೆದ ವಿವಿಧ ನಿಕಾಯಗಳ ಪರೀಕ್ಷಕರ ನೇಮಕಾತಿ ಮಂಡಳಿ ಸಭೆಯ ನಡಾವಳಿಗಳ ಸ್ಥಿರೀಕರಣ ಕುರಿತು.

**ನಿರ್ಣಯ:** ದಿನಾಂಕ:28-05-2024 ಹಾಗೂ ದಿನಾಂಕ:29-05-2024 ರಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಪರೀಕ್ಷಕರ ನೇಮಕಾತಿ ಮಂಡಳಿಗಳ ಸಭೆಯಲ್ಲಿ 2024-25 ನೇ ಸಾಲಿನ ಕಲಾ, ವಿಜ್ಞಾನ, ವಾಣಿಜ್ಯ, ಶಿಕ್ಷಣ ಹಾಗೂ ಕಾನೂನು ನಿಕಾಯಗಳ ಸ್ನಾತಕ ಮತ್ತು ಸ್ನಾತಕೋತ್ತರ (ರೆಗ್ಯುಲರ್ ಮತ್ತು ದೂರ ಶಿಕ್ಷಣ) ಕೋರ್ಸ್‌ಗಳ ಪರೀಕ್ಷೆಗಳಿಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ದ ಪ್ರಕರಣ 36(3) ರನ್ವಯ ವಿವಿಧ ಪರೀಕ್ಷಕರ ನೇಮಕಾತಿ ಮಂಡಳಿಗಳು ಸಂಬಂಧಿಸಿದ ಪರೀಕ್ಷಾ ಮಂಡಳಿಗಳನ್ನು ರಚಿಸಿದ್ದು, ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಗಳ ಪ್ರಕ್ರಿಯೆಗಳಲ್ಲಿ ಪರೀಕ್ಷಾ ಮಂಡಳಿಗಳು ತುರ್ತಾಗಿ ತೊಡಗಿಸಿಕೊಳ್ಳಬೇಕಾದ ಹಿನ್ನೆಲೆಯಲ್ಲಿ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ ಪರೀಕ್ಷಕರ ನೇಮಕಾತಿ ಮಂಡಳಿಗಳ ಶಿಫಾರಸ್ಸಿನ ಅನುಸಾರ ವಿವಿಧ ಪರೀಕ್ಷಾ ಮಂಡಳಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕ ಮಾಡಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2024-ಸಿಂ-3.35:** ಪದವಿ ಕೋರ್ಸ್‌ಗಳ ಆಂತರಿಕ ಅಂಕಗಳನ್ನು U.U.C.M.S. Portal ನಲ್ಲಿ ಕಾಲೇಜಿನ ಪ್ರಾಂಶುಪಾಲರುಗಳು ಕ್ರಮಬದ್ಧವಾಗಿ ಮಾಡದಿರುವುದರಿಂದ ಫಲಿತಾಂಶದಲ್ಲಿ ತೊಂದರೆಯುಂಟಾದ / ವಿಳಂಬವಾದ ಕುರಿತು.

**ಚರ್ಚೆ:** ಕುಲಸಚಿವ (ಮೌಲ್ಯಮಾಪನ) ರವರು ಮಾತನಾಡುತ್ತಾ, 2023-24 ನೇ ಸಾಲಿನ ಪದವಿ ಕೋರ್ಸ್‌ಗಳ ಆಂತರಿಕ ಅಂಕಗಳನ್ನು U.U.C.M.S. Portal ನಲ್ಲಿ ಕೆಲವು ಕಾಲೇಜಿನ ಪ್ರಾಂಶುಪಾಲರುಗಳು ಕ್ರಮಬದ್ಧವಾಗಿ U.U.C.M.S. ನ ನಿರ್ದೇಶನದಂತೆ ನಮೂದು ಮಾಡದಿರುವುದರಿಂದ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟವಾಗದೆ ಹಲವಾರು ವಿದ್ಯಾರ್ಥಿಗಳಿಗೆ ತೊಂದರೆಯುಂಟಾಗಿರುತ್ತದೆ. ಕಾಲೇಜಿನ ಪ್ರಾಂಶುಪಾಲರುಗಳು ಅವರ ಲಾಗಿನ್‌ನಲ್ಲಿ ಕ್ರಮಬದ್ಧವಾಗಿ ನಿರ್ವಹಣೆ ಮಾಡದಿರುವುದರಿಂದ ಈ ರೀತಿಯ ತೊಂದರೆಯುಂಟಾಗಿರುತ್ತದೆ. ಈ ಹಿನ್ನಲೆಯಲ್ಲಿ ಕಾಲೇಜುಗಳ ಪ್ರಾಂಶುಪಾಲರಿಗೆ ಪತ್ರ ಮುಖೇನ ಹಲವಾರು ಬಾರಿ ಸರಿಪಡಿಸಲು ತಿಳಿಸಿದ್ದರೂ, ಈ ಹಲವಾರು ನ್ಯೂನತೆಗಳು ಪದೇ ಪದೇ ಮರುಕಳಿಸಿ ವಿದ್ಯಾರ್ಥಿಗಳಿಗೆ, ವಿಶ್ವವಿದ್ಯಾಲಯಕ್ಕೆ ತೊಂದರೆ ಉಂಟುಮಾಡಿರುತ್ತಾರೆ. ಈ ಹಿನ್ನಲೆಯಲ್ಲಿ ಮುಂದಿನ ದಿನಗಳಲ್ಲಿ ಈ ರೀತಿಯಾದ ತಪ್ಪುಗಳು ಉದ್ಭವಿಸದಂತೆ ಕ್ರಮ ಕೈಗೊಳ್ಳುವ ಬಗ್ಗೆ ಚರ್ಚೆಗಾಗಿ ಸಿಂಡಿಕೇಟ್ ಸಭೆಗೆ ಮಂಡಿಸಿದೆ ಎಂದರು. ಪ್ರೊ. ವಿಷ್ಣುಮೂರ್ತಿರವರು ಮಾತನಾಡಿ, ಭದ್ರಾವತಿಯ ಸರ್.ಎಂ.ವಿ. ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ 70 ವಿದ್ಯಾರ್ಥಿಗಳಿಗೆ ಸಮಸ್ಯೆ ಇದ್ದು, ಇತ್ತೀಚೆಗೆ ಒಬ್ಬ ವಿದ್ಯಾರ್ಥಿ ಆತ್ಮಹತ್ಯೆಗೆ ಯತ್ನಿಸಿರುವುದಾಗಿ ತಿಳಿಸಿದರು. ಪ್ರೊ. ಎಸ್.ವಿ. ಕೃಷ್ಣಮೂರ್ತಿರವರು ಮಾತನಾಡಿ, ಕಾಲೇಜಿನಲ್ಲಿರುವ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ, ಅಗತ್ಯ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಬಂದು ಸರಿಪಡಿಸಿಕೊಳ್ಳುವಂತೆ ಹಲವು ಬಾರಿ ಪ್ರಾಂಶುಪಾಲರಿಗೆ ತಿಳಿಸಿದ್ದಾಗ್ಯೂ, ಅವರು ಈವರೆಗೂ ವಿಶ್ವವಿದ್ಯಾಲಯಕ್ಕೆ ಬಂದು ಸರಿಪಡಿಸಿಕೊಳ್ಳುತ್ತಿಲ್ಲ ಎಂದರು. ಕುಲಸಚಿವ (ಮೌಲ್ಯಮಾಪನ) ರವರು ಮಾತನಾಡಿ, ಕೆಲವು ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಅವರ ಗಮನಕ್ಕೆ ತರದೇ ಇರುವುದು ನೇರವಾಗಿ ಆನ್‌ಲೈನ್ ಮೂಲಕ ನಮೂದಿಸುತ್ತಾರೆ. ನಂತರದಲ್ಲಿ ವಿದ್ಯಾರ್ಥಿಗಳು ಕಡಿಮೆ ಅಂಕ ಬಂದಿದೆ ಹಾಗೂ ಆಂತರಿಕ ಅಂಕಗಳು ಬಿಟ್ಟು ಹೋಗುತ್ತಿವೆ ಎಂದು ವಿಶ್ವವಿದ್ಯಾಲಯಕ್ಕೆ ದೂರುತ್ತಾರೆ. ಈ ಹಿಂದೆ ಸುಮಾರು 3700 ಕ್ಕಿಂತ ಹೆಚ್ಚಿನ ವಿವಿಧ ರೀತಿಯ ಸಮಸ್ಯೆಗಳಿದ್ದವು, ಅವುಗಳಲ್ಲಿ ಬಹಳಷ್ಟನ್ನು ಬಗೆಹರಿಸಿದ್ದು, ಪ್ರಸ್ತುತ, 300 ಬಾಕಿ ಇವೆ. ಅಲ್ಲದೆ U.U.C.M.S. ತಂತ್ರಾಂಶದಲ್ಲಿ ಕಾಲೇಜಿನವರು ಮಾಡಿರುವಂತಹ ಪ್ರಮಾದಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳಬೇಕಾಗಿದೆ ಎಂದರು. ಡಾ.ಸಣ್ಣಹನುಮಪ್ಪ ರವರು ಮಾತನಾಡಿ ಯು.ಯು.ಸಿ.ಎಂ.ಎಸ್. ಆರಂಭವಾದ ನಂತರದಲ್ಲಿ ಕಾಲೇಜುಗಳಿಗೆ ಸೂಕ್ತ ತರಬೇತಿ ಹಾಗೂ ಗೈಡ್‌ಲೈನ್‌ಗಳನ್ನು ನೀಡಿಲ್ಲ. ಯು.ಯು.ಸಿ.ಎಂ.ಎಸ್. ನಲ್ಲಿ ಎಂಟ್ರಿ ಮಾಡುವಾಗ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಯಾವುದಾದರೂ ಬದಲಾವಣೆಗಳು ಇದ್ದಲ್ಲಿ ಕಾಲೇಜುಗಳಿಗೆ ಸುತ್ತೋಲೆ ಮುಖಾಂತರ ಮಾಹಿತಿ ನೀಡಬೇಕು ಎಂದರು. ಕುಲಸಚಿವ (ಮೌಲ್ಯಮಾಪನ) ರವರು ಮಾಹಿತಿ ನೀಡಿ ಮಾತನಾಡುತ್ತಾ, ಯು.ಯು.ಸಿ.ಎಂ.ಎಸ್. ನಲ್ಲಿ ಪ್ರತಿಯೊಂದಕ್ಕೂ ಬೆಂಗಳೂರಿಗೆ ಹೋಗಬೇಕು. ಯಾವುದೇ ಸಣ್ಣಪುಟ್ಟ ಬದಲಾವಣೆಗಳನ್ನು ಕೂಡ ಮಾಡಲು ವಿಶ್ವವಿದ್ಯಾಲಯಕ್ಕೆ ಅನುಮತಿ ಇಲ್ಲ. ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಿಗೆ ಸ್ವಲ್ಪವಾದರೂ autonomy ಇದ್ದಿದ್ದರೆ ಬಹಳಷ್ಟು ಸಮಸ್ಯೆಗಳು ಇಲ್ಲಿಯೇ ಬಗೆಹರಿಯುತ್ತಿದ್ದವು. ಆದರೆ ಯು.ಯು.ಸಿ.ಎಂ.ಎಸ್. ಸಾಫ್ಟ್‌ವೇರ್‌ನಲ್ಲಿ ಪರೀಕ್ಷೆಗೆ ಮುನ್ನ ಕಾಲೇಜಿನವರು ವಿದ್ಯಾರ್ಥಿಗಳ ಮಾಹಿತಿಯನ್ನು ಪರೀಕ್ಷಿಸಲು /ಮಾರ್ಪಾಡು ಮಾಡಲು ಅವಕಾಶವಿಲ್ಲ. ಆದುದರಿಂದ ಯು.ಯು.ಸಿ.ಎಂ.ಎಸ್. ಸಾಫ್ಟ್‌ವೇರ್‌ನ್ನು ಬಳಕೆದಾರರ ಸ್ನೇಹಿಯಾಗಿಸಿ ಪರೀಕ್ಷೆಗೆ ಮುನ್ನ ಕಾಲೇಜುಗಳಿಗೆ ಮತ್ತು ಫಲಿತಾಂಶ ಪ್ರಕಟಣೆಯವರೆಗೆ ಸಣ್ಣಪುಟ್ಟ ತಿದ್ದುಪಡಿಗಳಿಗೆ ವಿಶ್ವವಿದ್ಯಾಲಯಕ್ಕೆ ಅವಕಾಶ ಮಾಡಿಕೊಟ್ಟು, ಫಲಿತಾಂಶ ಪ್ರಕಟವಾದ ನಂತರ ಕೇಂದ್ರ ಕಛೇರಿಯವರು ಫ್ರೀಜ್ ಮಾಡಬಹುದಾಗಿದ್ದು, ಇದರಿಂದ ಗರಿಷ್ಠ ಮಟ್ಟದ ಸಮಸ್ಯೆಗಳು ಬಗೆಹರಿಯುತ್ತವೆ. ಯು.ಯು.ಸಿ.ಎಂ.ಎಸ್. ವ್ಯವಸ್ಥೆಯನ್ನು decentralization ಮಾಡಿ ನಮಗೆ ಲಾಗಿನ್ ಕೊಟ್ಟರೆ ಸರಳವಾಗುತ್ತದೆ. ಈ ಕುರಿತಾಗಿ ರಾಜ್ಯದ ಹಲವು ವಿಶ್ವವಿದ್ಯಾಲಯಗಳಿಂದ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು, ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರು. ಶ್ರೀ ಬಿ. ಎನ್. ಶಶಿಧರ್ ರವರು ಮಾತನಾಡಿ, U.U.C.M.S. ಇಡೀ ರಾಜ್ಯಕ್ಕೆ ಸಂಬಂಧಿಸಿದ್ದಾಗಿದೆ, ಸಂಯೋಜನೆ, ಪ್ರವೇಶ, ಆಂತರಿಕ ಅಂಕಗಳ ನಮೂದು, ಪರೀಕ್ಷೆಗಳು ಸೇರಿದಂತೆ ಒಂದು ತರಬೇತಿ ನೀಡಿರಿ ಮತ್ತು ಒಂದು ಕೈಪಿಡಿಯನ್ನು ಕಾಲೇಜುಗಳಿಗೆ ಒದಗಿಸಿ ಎಂದರು. ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಪ್ರತ್ಯೇಕವಾದ U.U.C.M.S. Cell ನ್ನು ಆರಂಭಿಸಿದ್ದು, ಅಗತ್ಯ ಮೂಲಭೂತ ಸೌಲಭ್ಯ ಮತ್ತು ಸಿಬ್ಬಂದಿಗಳನ್ನು ಒದಗಿಸಲಾಗಿದೆ. ಘಟಕಕ್ಕೆ ಸಂಯೋಜನೆ, ಪ್ರವೇಶ, ಪ್ರವೇಶಾನುಮೋದನೆ, ಪರೀಕ್ಷೆ ಹೀಗೆ ಪ್ರತ್ಯೇಕವಾದ ಮೂರ್‍ನಾಲ್ಕು Help Line (ಸಹಾಯವಾಣಿ) ಗಳನ್ನು ಆರಂಭಿಸಲಾಗುವುದು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಪ್ರತಿಯೊಂದು ವಿಶ್ವವಿದ್ಯಾಲಯದ Course Structure ಬೇರೆ ಬೇರೆ ಇದೆ. U.U.C.M.S. ನಿಂದ ವಿಶ್ವವಿದ್ಯಾಲಯಗಳ ಸ್ವಾಯತ್ತತೆಗೆ ಧಕ್ಕೆ ಆಗುತ್ತದೆ ಎಂದರು.

**ನಿರ್ಣಯ:** ಯು.ಯು.ಸಿ.ಎಂ.ಎಸ್. ನಿರ್ವಹಣೆ ಕುರಿತಾಗಿ ವಿಶ್ವವಿದ್ಯಾಲಯದ ವತಿಯಿಂದ ಕಾಲೇಜುಗಳ ಆಯ್ದ ಅಧ್ಯಾಪಕರು ಮತ್ತು ಸಿಬ್ಬಂದಿಗಳಿಗೆ ಸೂಕ್ತ ತರಬೇತಿ ನೀಡಬೇಕು. ಕಾಲೇಜಿನವರು ಕೂಡ ಎಲ್ಲಾ ಅಧ್ಯಾಪಕರು ಹಾಗೂ ಅಧ್ಯಾಪಕೇತರ ಸಿಬ್ಬಂದಿಗಳಗೆ ತರಬೇತಿ ನೀಡಬೇಕು. ಯು.ಯು.ಸಿ.ಎಂ.ಎಸ್. ಸಮಗ್ರ ನಿರ್ವಹಣೆ ಬಗ್ಗೆ ಸರ್ಕಾರದಿಂದ ಒಂದು ಕೈಪಿಡಿಯನ್ನು ಸಿದ್ಧಪಡಿಸಿ ಕಾಲೇಜುಗಳಿಗೆ ಕಳುಹಿಸುವಂತೆ ಮತ್ತು ಯು.ಯು.ಸಿ.ಎಂ.ಎಸ್. ಸಾಫ್ಟ್‌ವೇರ್‌ನ್ನು ಬಳಕೆದಾರರ ಸ್ನೇಹಿಯಾಗಿಸಿ, ಪರೀಕ್ಷೆಗೆ ಮುನ್ನ ಕಾಲೇಜುಗಳಿಗೆ ಮತ್ತು ಫಲಿತಾಂಶ ಪ್ರಕಟಣೆಯವರೆಗೆ ಸಣ್ಣಪುಟ್ಟ ತಿದ್ದುಪಡಿಗಳಿಗೆ ವಿಶ್ವವಿದ್ಯಾಲಯಕ್ಕೆ ಅವಕಾಶ ಮಾಡಿಕೊಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ನಿರ್ಣಯಿಸಲಾಯಿತು.

**2024-ಸಿಂ-3.35(ಎ):** ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಇ-ಟೆಂಡರ್ ಅಥವಾ ಜೆಮ್ ಪದ್ಧತಿಯನ್ನು ಅನುಸರಿಸಿ ಖರೀದಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ರೆಗ್ಯೂಲರ್ ಮತ್ತು ದೂರಶಿಕ್ಷಣದ ಮೂಲಕ ಅಧ್ಯಯನ ಮಾಡಿ, ಸ್ನಾತಕ/ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಈಗಾಗಲೇ ಉತ್ತೀರ್ಣರಾಗಿರುವ (2021-22, 2022-23, 2023-24 ಸಾಲಿನ) ವಿದ್ಯಾರ್ಥಿಗಳಿಗೆ ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸಲಾಗಿದೆ ಹಾಗೂ ಪರೀಕ್ಷೆಯನ್ನು ಬರೆಯಲಿರುವ ವಿದ್ಯಾರ್ಥಿಗಳಿಗೆ ಅಂಕಪಟ್ಟಿ/ ತಾತ್ಕಾಲಿಕ ಉತ್ತೀರ್ಣತಾ ಪತ್ರಗಳು/ ಘಟಿಕೋತ್ಸವ ಪ್ರಮಾಣ ಪತ್ರಗಳನ್ನು ನೀಡಬೇಕಾಗಿದ್ದು, ಅಗತ್ಯ ಪ್ರಮಾಣದ ಹಲವು ವಿಶೇಷತೆಗಳನ್ನು ಹೊಂದಿರುವ ರಕ್ಷಣಾತ್ಮಕ ಗುಣಗಳಿರುವ ಅಂಕಪಟ್ಟಿ/ ತಾತ್ಕಾಲಿಕ ಉತ್ತೀರ್ಣತಾ ಪತ್ರಗಳು/ಘಟಿಕೋತ್ಸವ ಪ್ರಮಾಣ ಪತ್ರಗಳನ್ನು ಮುದ್ರಿಸಿ ಸರಬರಾಜು



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಮಾಡುವ ಸಲುವಾಗಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮೂಲಕ ನಿಯಮಾನುಸಾರ ಇ-ಟೆಂಡರ್ ಪ್ರಕ್ರಿಯೆ ನಡೆಸಬೇಕೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು.

### ಅಭಿವೃದ್ಧಿ ವಿಭಾಗ

**2024-ಸಿಂ-3.36:** ಡಾ. ವೈ.ಎಲ್. ಕೃಷ್ಣಮೂರ್ತಿ, ಪ್ರಾಧ್ಯಾಪಕರು, ಸ್ನಾತಕೋತ್ತರ ಅನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ವಿಭಾಗ ಇವರು ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಬಂಧ ಮಂಡನೆಗೆ ಭಾಗವಹಿಸಲು ಅನುಮತಿ ನೀಡುವ ಕುರಿತು.

ನಿರ್ಣಯ: ವಿಶ್ವವಿದ್ಯಾಲಯದ ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪ್ರಾಧ್ಯಾಪಕರಾದ ಡಾ.ವೈ.ಎಲ್.ಕೃಷ್ಣಮೂರ್ತಿ ಇವರು ಸ್ಪೈನ್ ದೇಶದ ಮ್ಯಾಡ್ರಿಡ್‌ನಲ್ಲಿ ದಿನಾಂಕ:21-07-2024 ರಿಂದ 27-07-2024ರವರೆಗೆ ನಡೆಯುವ 22nd International Code of Botanical Nomeculture (ICBN) ಸಮ್ಮೇಳನದಲ್ಲಿ ಭಾಗವಹಿಸಿ ಪ್ರಬಂಧ ಮಂಡಿಸಲು ವಿಶ್ವವಿದ್ಯಾಲಯದ ಆರ್ಥಿಕ ಲಭ್ಯತೆಯನುಸಾರ ಪ್ರಯಾಣ ಭತ್ಯೆ, ದಿನಭತ್ಯೆಯಲ್ಲಿ ಶೇ.50 ರಷ್ಟು ಮತ್ತು ನೋಂದಣಿ ಶುಲ್ಕದ ಶೇ.50 ರಷ್ಟು ಅಥವಾ ಗರಿಷ್ಠ $200 ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಪಾವತಿಸಲು ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ ಮಂಜೂರಾತಿ ನೀಡಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

### ಯೋಜನೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ

**2024-ಸಿಂ-3.37:** ಯೋಜನೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ ಕಾರ್ಯ ಚಟುವಟಿಕೆಗಳ ವರದಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಬಗ್ಗೆ.

ನಿರ್ಣಯ: ವಿಶ್ವವಿದ್ಯಾಲಯದ ಯೋಜನೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಯ 2023-24ನೇ ಸಾಲಿನ ಕಾರ್ಯ ಚಟುವಟಿಕೆಗಳ ವರದಿಯನ್ನು ಸಭೆಯು ಅವಗಾನಿಸಿತು.

**ಸದಸ್ಯರು ಮಂಡಿಸಿರುವ ಪ್ರಸ್ತಾವನೆಗಳು**

**ದಿನಾಂಕ:19-07-2024 ರಂದು ನಡೆಯಲಿರುವ ಸಿಂಡಿಕೇಟ್ ಸಾಮಾನ್ಯ ಸಭೆಗೆ ವಿಷಯ ಮಂಡಿಸಿದೆ.**

**2024-ಸಿಂ-3.38:**
1) ಡಾ. ಅನಂತ ಎಸ್.
2) ಡಾ. ಸಣ್ಣಹನುಮಪ್ಪ ಜಿ.
3) ಡಾ. ಪರಮೇಶ ಮಸಲವಾಡ

**ಡಾ. ಅನಂತ ಎಸ್.**

**2024-ಸಿಂ-3.38(1-ಎ)** ಪ್ರೊ. ಮಂಜುನಾಥ್ ಕೆ.ಆರ್. ಮುಖ್ಯಸ್ಥರು ಎಂ.ಬಿ.ಎ. ವಿಭಾಗ, ಇವರು ಪರೀಕ್ಷಾಂಗ ವಿಭಾಗದಲ್ಲಿ ಪಡೆದಿರುವ ಸಂಭಾವನೆ ಹಾಗೂ ಲೋಕಲ್ ಕನ್ವೇಯನ್ಸ್ ಕುರಿತು.

ಪ್ರೊ. ಮಂಜುನಾಥ್ ಕೆ. ಆರ್. ಮುಖ್ಯಸ್ಥರು, ಎಂ.ಬಿ.ಎ. ವಿಭಾಗ, ಇವರು ಕಳೆದ ಕೆಲವು ವರ್ಷಗಳಿಂದ ಪರೀಕ್ಷಾಂಗ ವಿಭಾಗ ಹಾಗೂ ಮಾನವ ಸಂಪನ್ಮೂಲ ನಿರ್ವಹಣಾ ವಿಭಾಗಗಳಲ್ಲಿ ಉಪಕುಲಸಚಿವರಾಗಿ ಏಕಕಾಲದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಅರೆಕಾಲಿಕವಾಗಿ ಈ ಜವಾಬ್ದಾರಿಗಳನ್ನು ನಿಭಾಯಿಸುತ್ತಿದ್ದು, ಸಂಭಾವನೆ ಹಾಗೂ ಲೋಕಲ್ ಕನ್ವೇಯನ್ಸ್ ಅನ್ನು ತೆಗೆದುಕೊಳ್ಳಲು ಬರುವುದಿಲ್ಲ. ಏಕೆಂದರೆ ಪೂರ್ಣಕಾಲಿಕ ಪ್ರಭಾರವನ್ನು ವಹಿಸಿಕೊಂಡಲ್ಲಿ ಮಾತ್ರ ಸಂಭಾವನೆಯನ್ನು ಪಡೆಯಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಅವರು ಈ ಜವಾಬ್ದಾರಿಯನ್ನು ವಹಿಸಿಕೊಂಡ ದಿನದಿಂದ ಇಲ್ಲಿಯವರೆಗೆ ಪಡೆದಿರುವ ಈ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಎರಡೂ ಮೊತ್ತದ ವಿವರವನ್ನು ಹಣಕಾಸು ಅಧಿಕಾರಿಗಳು ಸಭೆಯಲ್ಲಿ ಪೂರ್ಣ ವಿವರ ನೀಡುವಂತೆ ಕೋರಲಾಗಿದೆ.

ವಿಷಯದ ಕುರಿತಾಗಿ ಸದಸ್ಯರಿಗೆ ನೀಡಿದ ಲಿಖಿತ ಮಾಹಿತಿ ಹಾಗೂ ವಿವರಗಳನ್ನು ಗಮನಿಸಲಾಯಿತು. ಮುಂದುವರೆದು ಮಾತನಾಡಿದ ಡಾ. ಅನಂತ ಎಸ್. ರವರು ಮೌಲ್ಯಮಾಪನ ಕೇಂದ್ರಗಳನ್ನು ಬೇರೆ ಬೇರೆ ನಗರಗಳಲ್ಲಿ ಹೆಚ್ಚಿಸಿ, ಮೌಲ್ಯಮಾಪನವನ್ನು ಬೇಗನೆ ಮುಗಿಸುವುದರಿಂದ ಆರ್ಥಿಕವಾಗಿ ಕೂಡ ಉಳಿತಾಯವಾಗುತ್ತದೆ ಎಂದರು. ಕುಲಸಚಿವ (ಮೌಲ್ಯಮಾಪನ) ರವರು ಮಾತನಾಡಿ ಬೇರೆ ನಗರಗಳಲ್ಲಿ ಮೌಲ್ಯಮಾಪನ ಕೇಂದ್ರಗಳನ್ನು ತೆರೆಯಲು ಅಗತ್ಯ ಸಿದ್ಧತೆಗಳನ್ನು ಪರಿಶೀಲಿಸಲಾಗಿತ್ತು. ಆದರೆ, ಮೌಲ್ಯಮಾಪನ ಮುಗಿದ ಕೂಡಲೇ ಯು.ಯು.ಸಿ.ಎಂ.ಎಸ್. ನಲ್ಲಿ ಅಂಕಗಳನ್ನು ನಮೂದಿಸಲು (ಎಂಟ್ರಿ) ಕಷ್ಟವಾಗುತ್ತದೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ ಶಿವಮೊಗ್ಗದಲ್ಲಿಯೇ ಹೆಚ್ಚಿನ ಮೌಲ್ಯಮಾಪನ ಕೇಂದ್ರಗಳನ್ನು ತೆರೆಯುವಂತೆ ಹಾಗೂ ಡಾ. ಕೆ.ಆರ್. ಮಂಜುನಾಥ್ ರವರಿಗೆ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಗಳ ಮೌಲ್ಯಮಾಪನಕ್ಕೆ ಸಂಬಂಧಪಟ್ಟಂತೆ ಸಂಭಾವನೆ ಪಾವತಿಸಿದ ಮಾಹಿತಿಯನ್ನು ಕೋರ್ಸ್‌ವಾರು, ಪರೀಕ್ಷೆವಾರು ವಿವರವಾದ ಪಟ್ಟಿಯನ್ನು ನೀಡುವಂತೆ ತಿಳಿಸಿದರು.

ಕುಲಸಚಿವ (ಮೌಲ್ಯಮಾಪನ) ರವರು ಮಾಹಿತಿ ನೀಡಿ ಮಾತನಾಡುತ್ತಾ, ನಗರ ಕಛೇರಿಯಲ್ಲಿಯೇ ಎನ್.ಎಸ್.ಎಸ್. ಸಂಯೋಜನಾಧಿಕಾರಿಯವರ ಕಛೇರಿಯನ್ನು ಬೇರೆ ಕೊಠಡಿಗಳಿಗೆ ಸ್ಥಳಾಂತರಿಸಿರುವುದರಿಂದ ಹೆಚ್ಚಿನ ಸ್ಥಳಾವಕಾಶ ಲಭ್ಯವಾಗಿದೆ. ಅಲ್ಲದೇ, ಈ ಹಿಂದೆ ಮೌಲ್ಯಮಾಪನ ನಡೆಯುತ್ತಿದ್ದ ಎಸ್.ಆರ್.ಎನ್.ಎಂ. ಅನ್ವಯಿಕ ವಿಜ್ಞಾನ ಕಾಲೇಜನ್ನು ಪರಿಶೀಲಿಸಿದ್ದು, ಅಲ್ಲಿ ಅಗತ್ಯ ಸೌಲಭ್ಯಗಳಿವೆ. ಆದುದರಿಂದ, ಕಲಾ, ವಾಣಿಜ್ಯ ಮತ್ತು ಶಿಕ್ಷಣ ವಿಷಯಗಳ ಉತ್ತರಪತ್ರಿಕೆಗಳ ಮೌಲ್ಯಮಾಪನವನ್ನು ನಗರ ಕಛೇರಿಯಲ್ಲಿ ಮತ್ತು ವಿಜ್ಞಾನ ವಿಷಯಗಳ ಮೌಲ್ಯಮಾಪನವನ್ನು ಎಸ್.ಆರ್.ಎನ್.ಎಂ. ಅನ್ವಯಿಕ ವಿಜ್ಞಾನ ಕಾಲೇಜಿನಲ್ಲಿ ನಡೆಸಲಾಗುವುದು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ ಮೌಲ್ಯಮಾಪನ ಕೇಂದ್ರಗಳಲ್ಲಿ ಅಧ್ಯಾಪಕರಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು. ಅವರಿಗೆ ಅನಾನುಕೂಲವಾಗದಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.

**2024–ಸಿಂ–3.38(1–ಬಿ)** ಕುವೆಂಪು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾಗಿರುವ ಸಹ್ಯಾದ್ರಿ ವಿಜ್ಞಾನ, ಕಲಾ ಹಾಗೂ ವಾಣಿಜ್ಯಶಾಸ್ತ್ರ ಕಾಲೇಜುಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿಗಳು ಹಾಗೂ ಹಾಸ್ಟೆಲ್ ಕೇರ್ ಟೇಕರ್ (ವಾರ್ಡನ್) ನಿಯೋಜಿಸಿರುವ ಕುರಿತು.

ಡಾ. ಅನಂತ್ ಎಸ್. ರವರು ಮಾತನಾಡಿ, ಸಹ್ಯಾದ್ರಿ ಕಾಲೇಜಿನಲ್ಲಿ ಕೆಲವು ಅಧ್ಯಾಪಕರುಗಳು ಬಹಳ ವರ್ಷಗಳಿಂದ ಹಾಸ್ಟೆಲ್ ವಾರ್ಡನ್ (ಕೇರ್ ಟೇಕರ್) ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಯಾವುದೇ ಆಯಕಟ್ಟಿನ ಹುದ್ದೆಯಲ್ಲಿ ಪ್ರಾಧ್ಯಾಪಕರುಗಳು ಮೂರು ವರ್ಷ ಕಾರ್ಯನಿರ್ವಹಿಸಬೇಕೆಂದು ವಿಶ್ವವಿದ್ಯಾಲಯದ ನಿಯಮಾವಳಿಯಲ್ಲಿ ಉಲ್ಲೇಖಿಸಲಾಗಿದೆ. ಆದುದರಿಂದ ಪ್ರಜಾಸತಾತ್ಮಕವಾಗಿ ನ್ಯಾಯಯುತವಾಗಿ ಸೇವಾ ಜೇಷ್ಠತೆಯನ್ನು ಗಮನದಲ್ಲಿರಿಸಿಕೊಂಡು ಈ ಹುದ್ದೆಗಳನ್ನು ರೊಟೇಷನ್ ಪದ್ಧತಿಯ ಮೇಲೆ ಒಬ್ಬರಿಗೆ ಒಂದು ಜವಾಬ್ದಾರಿಯನ್ನು ನೀಡಿ ನಿಯೋಜಿಸುವ ಕುರಿತು ಮಾಹಿತಿ ನೀಡಬೇಕೆಂದು ಕೋರಿದರು.

ಕುಲಸಚಿವರು ಮಾತನಾಡಿ, ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳ ಒಪ್ಪಿಗೆ ಪಡೆದುಕೊಂಡು, ಪ್ರಾಂಶುಪಾಲರೊಂದಿಗೆ ಚರ್ಚಿಸಿ ಆಸಕ್ತ ಅಧ್ಯಾಪಕರನ್ನು ಸರದಿಯ ಮೇಲೆ ಹಾಸ್ಟೆಲ್ ವಾರ್ಡನ್ (ಕೇರ್ ಟೇಕರ್) ಆಗಿ ಪ್ರತಿ ಮೂರು ವರ್ಷಗಳಿಗೊಮ್ಮೆ ನೇಮಕ ಮಾಡಲಾಗುವುದು ಎಂದು ನೀಡಿದ ಮಾಹಿತಿಯನ್ನು ಸಭೆಯು ಅನುಮೋದಿಸಿತು.

**2024–ಸಿಂ–3.38(1–ಸಿ)** ಸರ್ಕಾರದಿಂದ ವಿವಿಧ ವೃಂದವಾರು ಮಂಜೂರಾದ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಪ್ರಸ್ತುತ ಖಾಲಿ ಇರುವ ಹುದ್ದೆಗಳಿಗೆ ಅಧ್ಯಾಪಕೇತರ ನೌಕರರ ಜೇಷ್ಠತಾ ಪಟ್ಟಿಗೆ ಅನುಗುಣವಾಗಿ ಬಡ್ತಿ ನೀಡುವ ಕುರಿತು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಬೋಧಕೇತರ ನೌಕರರಿಗೆ ಈ ಹಿಂದೆ ನೀಡಿರುವ ಬಡ್ತಿಗಳನ್ನು 10 ವರ್ಷಗಳ ನಂತರ ಹಿಂಪಡೆದಿರುವುದು ಸರಿಯಷ್ಟೆ. ಸರ್ಕಾರದಿಂದ ಮಂಜೂರಾದ ಹುದ್ದೆಗಳ ಸಂಖ್ಯೆಗಳಿಗೆ ಅನುಗುಣವಾಗಿ ಬಡ್ತಿ, ನಿವೃತ್ತಿ, ಮರಣಗಳಿಂದ ತೆರವಾದ ಪ್ರಸ್ತುತ ಖಾಲಿ ಇರುವ ಹುದ್ದೆಗಳಿಗೆ ಅರ್ಹತಾ ದಿನಾಂಕಗಳಿಗೆ ನಿಯಮಾನುಸಾರ ಬಡ್ತಿ ನೀಡಬೇಕಿತ್ತು. ಆದರೆ ಏಕಾಏಕಿಯಾಗಿ ಹಿಂಬಡ್ತಿ ಮಾಡಿದ್ದು, ಬಡ್ತಿಗೆ ಅವಕಾಶವಿರುವ ಹಲವಾರು ನೌಕರರಿಗೆ ಅನ್ಯಾಯವಾಗಿರುತ್ತದೆ. ಹಿಂಬಡ್ತಿಯನ್ನು ನೀಡಬೇಕಾದರೆ ತಾವು ಕಾರ್ಯನಿರ್ವಹಿಸುತ್ತಿರುವ ಹುದ್ದೆಯಿಂದ ಸಮೀಪದ ಹಿಂದಿನ ಹುದ್ದೆಗೆ ಹಿಂಬಡ್ತಿಯನ್ನು ನೀಡಬೇಕಾಗಿತ್ತು. ಆದರೆ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಕೆಳಹಂತದ ಹುದ್ದೆಗಳಿಗೆ ಹಿಂಬಡ್ತಿ ನೀಡಿರುವುದು ನಿಯಮಬಾಹಿರವಾಗಿರುತ್ತದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆಗಳಿಗೆ ಬಡ್ತಿ ಹಾಗೂ ವೇತನ ನಿಗದಿಕರಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ಹಾಗೂ ಕೈಗೊಂಡಿರುವ ಕ್ರಮಗಳ ಮಾಹಿತಿ ನೀಡಲು ಕೋರಿದೆ.

ಈ ವಿಷಯದ ಕುರಿತಾಗಿ ವಿಷಯ ಸಂಖ್ಯೆ: 2024–ಸಿಂ–3.31(ಐ) ರಲ್ಲಿ ಚರ್ಚಿಸಿ ನಿರ್ಣಯಿಸಿರುವುದನ್ನು ಸದಸ್ಯರ ಗಮನಕ್ಕೆ ತರಲಾಯಿತು.

**2024–ಸಿಂ–3.38(1–ಡಿ) ಪ್ರೊ. ಸಿ. ಗೀತಾ, ಪ್ರಾಧ್ಯಾಪಕರು, ಸ್ನಾತಕೋತ್ತರ ಶಿಕ್ಷಣ ವಿಭಾಗ, ಕುವೆಂಪು ವಿಶ್ವವಿದ್ಯಾಲಯ ರವರ ಸ್ಮಾರ್ಟ್‌ಕ್ಲಾಸ್ ಪ್ರಕರಣಕ್ಕೆ ಸಂಬಂಧಿಸಿದಂತೆ, ತನಿಖಾ ಸಮಿತಿಯನ್ನು ನೇಮಿಸಿರುವ ಕುರಿತು.**

ಡಾ. ಅನಂತ ಎಸ್. ರವರು ಮಾತನಾಡಿ ವಿಷಯದಲ್ಲಿ ಪ್ರೊ. ಸಿ. ಗೀತಾ, ಪ್ರಾಧ್ಯಾಪಕರು, ಸ್ನಾತಕೋತ್ತರ ಶಿಕ್ಷಣ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಎನ್ನುವ ಬದಲಾಗಿ 'ವಿಶ್ವವಿದ್ಯಾಲಯದ ಸ್ಮಾರ್ಟ್‌ಕ್ಲಾಸ್ ಪ್ರಕರಣ' ಎಂಬುದಾಗಿ ತಿದ್ದುಪಡಿ ಮಾಡಿಕೊಳ್ಳುವಂತೆ ಮನವಿ ಮಾಡಿದರು. ಮುಂದುವರೆದು ಮಾತನಾಡಿದ ಅವರು, ಸ್ಮಾರ್ಟ್‌ಕ್ಲಾಸ್ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ. ಆದರೆ ಸರ್ಕಾರವು ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀ ರವೀಂದ್ರನಾಥ್ ಹೆಚ್. ಬಿ. ತನಿಖಾ ಸಮಿತಿ ಹಾಗೂ ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ಶಶಿಕಲಾ, ಅಧ್ಯಕ್ಷರಾಗಿರುವ ತ್ರಿಸದಸ್ಯ ತನಿಖಾ ಸಮಿತಿಯನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ರಚಿಸಲಾಗಿದೆ. ಮಾನ್ಯ ಕುಲಪತಿಗಳು ಹಾಗೂ ಮಾನ್ಯ ಕುಲಸಚಿವರು ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುವ ಪ್ರಕರಣದ ಮಾಹಿತಿಯನ್ನು ಸರ್ಕಾರದ ಗಮನಕ್ಕೆ ತರಬೇಕು. ಏಕೆಂದರೆ ಈಗಾಗಲೇ ನ್ಯಾಯಾಲಯದ ವಿಚಾರಣೆ ಹಂತದಲ್ಲಿರುವ ಪ್ರಕರಣದಲ್ಲಿ ಇಂತಹ ವಿಚಾರಣಾ ಸಮಿತಿಗಳ ತನಿಖೆ ನಡೆದಲ್ಲಿ ಅದು ನ್ಯಾಯಾಂಗದ ನಿಂದನೆಯಾಗುತ್ತದೆ. ಆದುದರಿಂದ ಕೂಡಲೇ ಈ ಸಂಬಂಧ ಸರ್ಕಾರಕ್ಕೆ ಪತ್ರ ಬರೆದು ಈ ಮಾಹಿತಿ ನೀಡುವಂತೆ ಕೋರಿದರು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ಹಿಂದಿನ ಕುಲಪತಿಯವರು, ಕುಲಸಚಿವ (ಮೌಲ್ಯಮಾಪನ) ಮತ್ತು ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ ಇವರ ವಿರುದ್ಧದ ಆರೋಪಗಳ ಕುರಿತು ತನಿಖೆ ನಡೆಸಲು ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ರಚಿಸಿದ್ದ ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀ ರವೀಂದ್ರನಾಥ್ ಹೆಚ್.ಬಿ. ತನಿಖಾ ಸಮಿತಿಗೆ ಸ್ಮಾರ್ಟ್‌ಕ್ಲಾಸ್ ಪ್ರಕರಣದ ಬಗ್ಗೆ ಕೂಡ ತನಿಖೆ ನಡೆಸಲು ತಿಳಿಸಿದೆ. ನಂತರದಲ್ಲಿ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯು ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ಶಶಿಕಲಾ, ಅಧ್ಯಕ್ಷರಾಗಿರವ ತ್ರಿಸದಸ್ಯ ತನಿಖಾ ಸಮಿತಿಯನ್ನು ರಚಿಸಿದ್ದು, ಸಮಿತಿಯು ತನಿಖೆ ನಡೆಸುತ್ತಿದೆ. ಈ ಪ್ರಕರಣವು ಪ್ರಸ್ತುತ ನ್ಯಾಯಾಲಯದಲ್ಲಿದ್ದು, ಇದರಲ್ಲಿ ಸರ್ಕಾರವನ್ನು ಕೂಡ ಪಾರ್ಟಿ ಮಾಡಿದ್ದಾರೆ. ವಿಶ್ವವಿದ್ಯಾಲಯವು ಸ್ಮಾರ್ಟ್‌ಕ್ಲಾಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ಣಯವನ್ನು ತೆಗೆದುಕೊಂಡಿರುವುದಿಲ್ಲ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.

**2024–ಸಿಂ–3.38(2): ಡಾ. ಸಣ್ಣಹನುಮಪ್ಪ ಜಿ.**



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

**2024–ಸಿಂ–3.38(2–ಎ)** 2024–25ನೇ ಶೈಕ್ಷಣಿಕ ಸಾಲಿನ ಸಾಗರ ಗಂಗೋತ್ರಿ ಬಿ.ಇಡಿ. ಕಾಲೇಜಿನ ಸಂಯೋಜನೆ ಕುರಿತು.

2024–25ನೇ ಶೈಕ್ಷಣಿಕ ಸಾಲಿನಲ್ಲಿ ಸಾಗರ ಗಂಗೋತ್ರಿ ಬಿ.ಇಡಿ. ಕಾಲೇಜಿನ ಸಂಯೋಜನೆ ನೀಡಲಾಗಿದೆಯೇ? ಅಥವಾ ಇಲ್ಲವೇ ಈ ಸಂಬಂಧ ಕು.ವಿ.ವಿ.ಯ ಸಿ.ಡಿ.ಸಿ ತೆಗೆದುಕೊಂಡ ತೀರ್ಮಾನವೇನು ಈ ಬಗೆಗೆ ಮಾಹಿತಿ ಒದಗಿಸುವುದು.

ಸಾಗರ ಗಂಗೋತ್ರಿ ಬಿ.ಇಡಿ. ಕಾಲೇಜಿನವರು 2024–25ನೇ ಸಾಲಿಗೆ ಸಂಯೋಜನೆಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಕಾಲೇಜಿಗೆ ದಿನಾಂಕ:19–06–2024 ರಂದು ಸ್ಥಳೀಯ ತಪಾಸಣಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿರುತ್ತದೆ. ಪರಿಶೀಲನೆ ಸಂದರ್ಭದಲ್ಲಿ ಸಮಿತಿಯ ಅಧ್ಯಕ್ಷರಿಗೆ ಸಂಸ್ಥೆಯ ಅಧ್ಯಕ್ಷರು ಮತ್ತು ಕಾಲೇಜಿನ ಪ್ರಾಂಶುಪಾಲರು ದಿನಾಂಕ:19–06–2024 ರ ಪತ್ರದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ದೃಢೀಕೃತ ಆದೇಶ ಪ್ರತಿ ಮತ್ತು ಎನ್.ಸಿ.ಟಿ.ಇ. ಮಾನ್ಯತೆ ಪತ್ರವನ್ನು ದಿನಾಂಕ:05–07–2024 ರೊಳಗಾಗಿ ವಿಶ್ವವಿದ್ಯಾಲಯಕ್ಕೆ ಖುದ್ದಾಗಿ ತಲುಪಿಸುತ್ತೇವೆ ಎಂದು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸಮಿತಿಯು ಆನ್‌ಲೈನ್‌ನಲ್ಲಿ 'ಸಬ್‌ಮಿಟ್' ನೀಡಿರುವುದಿಲ್ಲ. ಎನ್.ಸಿ.ಟಿ.ಇ. ಅನುಮತಿ ಆದೇಶ ಪತ್ರ ಬಂದ ನಂತರ ಪರಿಶೀಲಿಸಿ 2024–25ನೇ ಸಾಲಿನ ಸಂಯೋಜನೆ ಬಗ್ಗೆ ಕ್ರಮ ವಹಿಸಲಾಗುವುದು ಎಂಬ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಯಿತು.

**2024–ಸಿಂ–3.38(2–ಬಿ)** 2021–22ನೇಯ ಸಾಲಿನ ಸ.ಪ್ರ.ದ. ಕಾಲೇಜು, ಸಾಗರ ಪ್ರಥಮ ಬಿ.ಕಾಂ. ಪದವಿಯ ಫಲಿತಾಂಶ ಸಂಬಂಧ.

2021–22ನೇಯ ಸಾಲಿನ ಸ.ಪ್ರ.ದ. ಕಾಲೇಜು, ಸಾಗರ ಪ್ರಥಮ ಬಿ.ಕಾಂ. ಪದವಿಯ ಎರಡನೇಯ ಸೆಮಿಸ್ಟರ್‌ನ Advanced Financial Accounting-qp code-32221 ಪತ್ರಿಕೆಯ ಫಲಿತಾಂಶ ಇದುವರೆವಿಗೂ ಪ್ರಕಟವಾಗಿರುವುದಿಲ್ಲ. ಈ ಬಗೆಗೆ ವಿಶ್ವವಿದ್ಯಾಲಯ ತೆಗೆದುಕೊಂಡಿರುವ ಕ್ರಮಗಳೇನು ಎಂಬ ಬಗ್ಗೆ.

ಪ್ರಾಂಶುಪಾಲರು; ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಾಗರ ಇವರಿಗೆ 2021–22ನೇ ಸಾಲಿನ ಪ್ರಥಮ ಬಿ.ಕಾಂ. ಫಲಿತಾಂಶ ಸಂಬಂಧ ಪತ್ರಿಸಿದ್ದು, ಕಾಲೇಜಿನ ವಿದ್ಯಾರ್ಥಿಗಳು ಶೈಕ್ಷಣಿಕ ವಿಭಾಗದಿಂದ ಸೂಚಿಸಿದ Advanced Financial Accounting – QP code-32221 ಪತ್ರಿಕೆಯನ್ನು ಆಯ್ಕೆ ಮಾಡಿಕೊಂಡಿರುವುದಿಲ್ಲ. ಬದಲಿಗೆ ತಪ್ಪಾದ ವಿಷಯದ ಕೋಡ್ ಸಂಖ್ಯೆಗೆ ಕೋರ್ಸ್ ರಿಜಿಸ್ಟ್ರೇಷನ್ ಮಾಡಿಕೊಂಡಿರುವುದರಿಂದ ಫಲಿತಾಂಶ ಪ್ರಕಟವಾಗಿರುವುದಿಲ್ಲ. ಆದ್ದರಿಂದ ವಿದ್ಯಾರ್ಥಿಗಳ ಫಲಿತಾಂಶವನ್ನು ಪ್ರಕಟಿಸಲು ಅಗತ್ಯವಿರುವ ದಾಖಲಾತಿಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಖುದ್ದಾಗಿ ಭೇಟಿ ನೀಡಿದಲ್ಲಿ ವಿದ್ಯಾರ್ಥಿಗಳ ಫಲಿತಾಂಶವನ್ನು ಪ್ರಕಟಿಸುವ ಕ್ರಮವನ್ನು ಕೈಗೊಳ್ಳಲಾಗುವುದು ಎಂಬ ಅಂಶವನ್ನು ಕಾಲೇಜಿನ ಪ್ರಾಂಶುಪಾಲರ ಗಮನಕ್ಕೆ ತರಲಾಗಿದೆ ಎಂದು ಕುಲಸಚಿವ (ಮೌಲ್ಯಮಾಪನ) ರವರು ನೀಡಿರುವ ಮಾಹಿತಿಯನ್ನು ಸಭೆಯ ಗಮನಕ್ಕೆ ತರಲಾಯಿತು.

**2024–ಸಿಂ–3.38(2–ಸಿ)** ಶ್ರೀ ಚಂದ್ರಕಾಂತ ಎಂ. ಸಹಾಯಕ ಕುಲಸಚಿವರು ಐ.ಕ್ಯೂ.ಎ.ಸಿ. ವಿಭಾಗ ಇವರ ನೇಮಕಾತಿ ಸಂಬಂಧ.

ಶ್ರೀ ಚಂದ್ರಕಾಂತ ಎಂ. ಸಹಾಯಕ ಕುಲಸಚಿವರು ಐ.ಕ್ಯೂ.ಎ.ಸಿ. ವಿಭಾಗ ಇವರ ನೇಮಕಾತಿಯ ವಿಲೀನೀಕರಣ ಸಂಬಂಧ ಸರ್ಕಾರಿ ಆದೇಶ ಸಂಖ್ಯೆ:ಇಡಿ/06/ಯುಎಸ್‌ಎಸ್/2007, ಬೆಂಗಳೂರು ದಿನಾಂಕ:26 ಮಾರ್ಚ್ 2013 ರ ಪ್ರಕಾರ ವಿಶ್ವವಿದ್ಯಾಲಯ ತೆಗೆದುಕೊಂಡ ಕ್ರಮಗಳೇನು? ಈ ಬಗೆಗೆ ವಿವರವಾದ ಮಾಹಿತಿ ಒದಗಿಸುವುದು.

ಕುಲಸಚಿವರು ಮಾಹಿತಿ ನೀಡಿ, ಸರ್ಕಾರದ ಪತ್ರದಲ್ಲಿ ಕೋರಿರುವ ಮಾಹಿತಿಗೆ ವಿಶ್ವವಿದ್ಯಾಲಯದಿಂದ ಹಲವಾರು ಬಾರಿ ಪತ್ರ ಬರೆಯಲಾಗಿದೆ. ಇದೊಂದು ಸೇವಾ ವಿಷಯಕ್ಕೆ ಸಂಬಂಧಪಟ್ಟ ಪ್ರಕರಣವಾಗಿರುವುದರಿಂದ, ಈ ಪ್ರಕರಣದ ಬಗ್ಗೆ ನಿಯಮಗಳು ಹಾಗೂ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಸುಪ್ರೀಂ ಕೋರ್ಟ್ ಸೇರಿದಂತೆ ನ್ಯಾಯಾಲಯಗಳ ವಿವಿಧ ತೀರ್ಪುಗಳನ್ನು ಪರಿಶೀಲಿಸಿ ಸೂಕ್ತ ತೀರ್ಮಾನ ತೆಗೆದುಕೊಂಡು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲಾಗುವುದು ಎಂದರು.

**2024–ಸಿಂ–3.38(2–ಡಿ)** ಡಾ. ಸುರೇಶ ಎಂ. ಸಹ ಪ್ರಾಧ್ಯಾಪಕರು ಎಂ.ಸಿ.ಎ. ಮತ್ತು ಕಂಪ್ಯೂಟರ್ ಸೈನ್ಸ್ ವಿಭಾಗ ಇವರನ್ನು B.O.S. ಅಧ್ಯಕ್ಷರನ್ನಾಗಿ ನೇಮಕ ಮಾಡುವ ಸಂಬಂಧ.

ಡಾ. ಸುರೇಶ ಎಂ. ಸಹ ಪ್ರಾಧ್ಯಾಪಕರು ಎಂ.ಸಿ.ಎ. ಮತ್ತು ಕಂಪ್ಯೂಟರ್ ಸೈನ್ಸ್, ವಿಭಾಗ ಇವರನ್ನು ಪಿ.ಜಿ. ಮತ್ತು ಯು.ಜಿ. ವಿಭಾಗಗಳಿಗೆ ಬಿ.ಓ.ಎಸ್. ಅಧ್ಯಕ್ಷರಾಗಿ ನೇಮಕ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು? ಮಾಹಿತಿ ಒದಗಿಸುವುದು

ಡಾ. ಸುರೇಶ ಎಂ. ಸಹ ಪ್ರಾಧ್ಯಾಪಕರು ಎಂ.ಸಿ.ಎ. ಮತ್ತು ಕಂಪ್ಯೂಟರ್ ಸೈನ್ಸ್ ವಿಭಾಗ ಇವರನ್ನು ವಿಶ್ವವಿದ್ಯಾಲಯದ ಸೇವೆಯಿಂದ ಅಮಾನತ್ತುಗೊಳಿಸಿದ ಹಿನ್ನೆಲೆಯಲ್ಲಿ, ಎಂ.ಸಿ.ಎ. ಮತ್ತು ಕಂಪ್ಯೂಟರ್ ಸೈನ್ಸ್, ವಿಭಾಗದ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಮಂಡಳಿಯ ಅಧ್ಯಕ್ಷರ ಸ್ಥಾನದಿಂದ ಮುಕ್ತಗೊಳಿಸಲಾಗಿತ್ತು. ಅವರ ವಿರುದ್ಧ ಹೊರಿಸಲಾಗಿರುವ ಆರೋಪಗಳ ಕುರಿತು ಪರಿಶೀಲಿಸಿ ಇಲಾಖಾ ವಿಚಾರಣೆ ನಡೆಸಲು ರಚಿಸಲಾಗಿರುವ ಸಮಿತಿಯ ಮುಂದೆ ಹಾಜರಾಗುವ ಷರತ್ತಿಗೊಳಪಟ್ಟು ಸ್ನಾತಕೋತ್ತರ ಎಂ.ಸಿ.ಎ. / ಕಂಪ್ಯೂಟರ್ ಸೈನ್ಸ್ ವಿಭಾಗಕ್ಕೆ ಸ್ಥಳ ನಿಯುಕ್ತಿಗೊಳಿಸಲಾಗಿದೆ. ಸದರಿಯವರ ಮೇಲಿನ ಆರೋಪಗಳ ಕುರಿತು ಇಲಾಖಾ ವಿಚಾರಣೆ ಬಾಕಿ ಇರುವ ಹಿನ್ನೆಲೆಯಲ್ಲಿ ಸದರಿಯವರು ಇಲಾಖಾ ವಿಚಾರಣೆಯಿಂದ ಮುಕ್ತವಾದ ನಂತರ ನಿಯಮಾನುಸಾರ ಸದರಿಯವರಿಗೆ ಬಿ.ಓ.ಎಸ್. ಅಧ್ಯಕ್ಷರ ನೇಮಕ ಮಾಡುವ ಸಂಬಂಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಸದಸ್ಯರಿಗೆ ಮಾಹಿತಿ ನೀಡಲಾಯಿತು.

**2024–ಸಿಂ–3.38(3) ಡಾ. ಪರಮೇಶ ಮಸಲವಾಡ**

ಡಾ. ಪರಮೇಶ ಮಸಲವಾಡ ರವರು ಸಭೆಯ ಕಲಾಪದಲ್ಲಿ ಇರಲಿಲ್ಲವಾದ್ದರಿಂದ, ಸದಸ್ಯರ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರವನ್ನು ಎಲ್ಲಾ ಸದಸ್ಯರಿಗೆ ಒದಗಿಸಿರುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು.

**2024–ಸಿಂ–3.39 ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ**

**ಯಾವುದೂ ಇಲ್ಲ.**

**2024–ಸಿಂ–3.40 ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

**2024–ಸಿಂ–3.40(1)** ಡಾ. ಅನಂತ ಎಸ್. ರವರು ಮಾತನಾಡಿ, ಗ್ರಂಥಾಲಯ ಸಹಾಯಕರು ಹಾಗೂ ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್‌ಗಳಿಗೆ ವೇತನ ಬಿಡುಗಡೆಯಾಗದ ಬಗ್ಗೆ ಮಾಹಿತಿ ಕೇಳಿದರು.

ಕುಲಸಚಿವರು ಮಾತನಾಡಿ, ಗ್ರಂಥಾಲಯ ಸಹಾಯಕರಿಗೆ ನೇಮಕಾತಿ ಅಧಿಸೂಚನೆಯಲ್ಲಿ ತಿಳಿಸಿದ್ದ ವೇತನ ಶ್ರೇಣಿಯನ್ನು ಸರ್ಕಾರದ ಕೆಲವು ಇಲಾಖೆಗಳಲ್ಲಿನ ಗ್ರಂಥಾಲಯ ಸಹಾಯಕರ ವೇತನಕ್ಕೆ ಹೆಚ್ಚಿಸಿ, ಸರ್ಕಾರದಿಂದ ಪರಿನಿಯಮ ಅನುಮೋದನೆ ಕಾಯ್ದಿರಿಸಿ, ಪರಿಷ್ಕೃತ ವೇತನ ಪಾವತಿಸಲಾಗಿತ್ತು. ಆದರೆ, ಈವರೆಗೂ ಪರಿನಿಯಮ ಅನುಮೋದನೆಯಾಗದಿರುವ ಹಿನ್ನೆಲೆಯಲ್ಲಿ ಪರಿಷ್ಕೃತ ವೇತನ ಪಾವತಿಸಲು ಆಕ್ಷೇಪಣೆ ವ್ಯಕ್ತಪಡಿಸಿದ್ದಾರೆ. ಮುಂದುವರೆದು ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್ ಹುದ್ದೆಗಳು ಸರ್ಕಾರದಿಂದ ಮಂಜೂರಾಗಿರಲಿಲ್ಲ. ಆದರೆ, ವಿಶ್ವವಿದ್ಯಾಲಯಕ್ಕೆ ಕಂಪ್ಯೂಟರ್ ತಜ್ಞರ ಅಗತ್ಯವಿದ್ದರಿಂದ, ವಿಶ್ವವಿದ್ಯಾಲಯಕ್ಕೆ ಮಂಜೂರಾಗಿ, ಭರ್ತಿಯಾಗದೇ ಖಾಲಿ ಇದ್ದ ತತ್ಸಮಾನ ವೇತನ ಶ್ರೇಣಿ ಇದ್ದ 12 ತಾಂತ್ರಿಕ ಸಹಾಯಕ ಹುದ್ದೆಗಳಲ್ಲಿ 04 ಹುದ್ದೆಗಳನ್ನು ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್ ಹುದ್ದೆಗಳಾಗಿ ಪರಿವರ್ತಿಸಲಾಗಿದ್ದು, ಸರ್ಕಾರದಿಂದ ದಿನಾಂಕ:29–11–1996 ರಲ್ಲಿ ಅನುಮೋದನೆ ಪಡೆಯಲಾಗಿತ್ತು. ಆದರೆ ನಂತರದಲ್ಲಿ ಸರ್ಕಾರದಲ್ಲಿ ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್ ಹುದ್ದೆಗಳ ವೇತನ ಶ್ರೇಣಿಗಳು ಬದಲಾಗಿದ್ದು, ಸದರಿ ವೇತನ ಶ್ರೇಣಿಯನ್ನು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್‌ಗಳಿಗೆ ವಿಸ್ತರಿಸಲಾಗಿತ್ತು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಆದರೆ, ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು ತಾಂತ್ರಿಕ ಸಹಾಯಕ ಹುದ್ದೆಯ ತತ್ಸಮಾನ ವೇತನ ಶ್ರೇಣಿಯಲ್ಲಿ ಸದರಿ ನೌಕರರು ನೇಮಕಗೊಂಡು ಕರ್ತವ್ಯ ನಿರ್ವಹಿಸಬೇಕಾಗಿದ್ದು, ಸರ್ಕಾರದ ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್ ಹುದ್ದೆಯ ವೇತನಶ್ರೇಣಿ ಪಾವತಿಸಲು ಸರ್ಕಾರದಿಂದ ಅನುಮೋದನೆ ಪಡೆದಿಲ್ಲವೆಂಬ ಕಾರಣದಿಂದ ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್‌ಗಳಿಗೆ ವೇತನ ಪಾವತಿಸಲು ಆಕ್ಷೇಪಿಸಿದ್ದಾರೆ. ಆದಾಗ್ಯೂ ಅವರುಗಳಿಗೆ ವೇತನ ಪಾವತಿಸುವಂತೆ ಜಂಟಿ ನಿರ್ದೇಶಕರಿಗೆ ಪತ್ರ ಬರೆಯಲಾಗಿದೆ ಎಂದರು.

**2024–ಸಿಂ–3.40(2ಎ)** ಶ್ರೀ ಶಶಿಧರ ಬಿ.ಎನ್. ರವರು ಮಾತನಾಡಿ, ಇತ್ತೀಚೆಗೆ ವಿಶ್ವವಿದ್ಯಾಲಯದ ವಿದ್ಯಾರ್ಥಿಯೊಬ್ಬ ಆತ್ಮಹತ್ಯಗೆ ಪ್ರಯತ್ನಿಸಿದ ಬಗ್ಗೆ ಮಾಹಿತಿ ಕೇಳಿದರು.

ಆ ಸಂದರ್ಭದಲ್ಲಿ ಪ್ರಭಾರ ಕುಲಪತಿಯಾಗಿ ಕಾರ್ಯನಿರ್ವಹಿಸಿದ್ದ ಪ್ರೊ. ಎಸ್.ವಿ. ಕೃಷ್ಣಮೂರ್ತಿ ರವರು ಮಾತನಾಡಿ, ಸ್ನಾತಕೋತ್ತರ ಪ್ರವಾಸೋದ್ಯಮ ನಿರ್ವಹಣೆ ಅಧ್ಯಯನ ವಿಭಾಗದ ವಿದ್ಯಾರ್ಥಿಯೊಬ್ಬ ತನ್ನ ಸಹಪಾಠಿಗಳಿಗೆ ತಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ವಾಟ್ಸಪ್‌ನಲ್ಲಿ 10 ಪುಟಗಳ ಸಂದೇಶ ಕಳುಹಿಸಿ, ತರಗತಿ ಕೊಠಡಿಯೊಳಗೆ ಚಿಕ್ಕ ದಾರದಿಂದ ನೇಣು ಬಿಗಿದುಕೊಳ್ಳಲು ಯತ್ನಿಸಿದ್ದಾನೆ. ಆದರೆ, ದಾರ ತುಂಡಾಗಿ ಅವನು ಕೆಳಗೆ ಬಿದ್ದಿದ್ದು, ಅವನನ್ನು ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿದೆ. ಈಗ ಅವನು ಆರೋಗ್ಯವಾಗಿದ್ದು, ಆತನ ಪೋಷಕರೊಂದಿಗೆ ಕೂಡ ಚರ್ಚಿಸಲಾಗಿದೆ. ಅವನಿಗೆ **ಪ್ಯಾಂಕ್ರಿಯಾನ್** ಎಂಬ ಕಾಯಿಲೆ ಇರುವುದಾಗಿ ಹಾಗೂ ಅವನಿಗೆ ಇದರ ಚಿಕಿತ್ಸೆ ಕೊಡಿಸಿರುವುದಾಗಿ ತಿಳಿಸಿದ್ದಾರೆ. ಸದರಿ ವಿದ್ಯಾರ್ಥಿಯೊಂದಿಗೆ ಮಾತನಾಡಿದಾಗ, ತಾನು ತುಂಬಾ ಎಕ್ಸೈಟ್ ಆಗಿ ಈ ಕೃತ್ಯ ಎಸಗಿದ್ದು, ಈ ಬಗ್ಗೆ ನನಗೆ ತುಂಬಾ ವಿಷಾದವಿದೆ. ವಿಭಾಗದಲ್ಲಿ ಅಧ್ಯಾಪಕರು ತುಂಬಾ ಸಹಕಾರಿಗಳಾಗಿದ್ದು, ಉತ್ತಮ ಬೋಧನೆ ಮಾಡುತ್ತಿದ್ದಾರೆ ಎಂದಿದ್ದಾರೆ. ಈ ಘಟನೆ ಹಿನ್ನೆಲೆಯಲ್ಲೆ ಮಾರನೇ ದಿನ ವಿದ್ಯಾರ್ಥಿಗಳು ಇತರೆ ಬೇಡಿಕೆಗಳೊಂದಿಗೆ ಮುಷ್ಕರ ನಡೆಸಿದ್ದಾರೆ ಎಂದರು. ಮಾನ್ಯ ಕುಲಸಚಿವರು ಮಾತನಾಡಿ, ಈ ಘಟನೆ ಹಾಗೂ ವಿದ್ಯಾರ್ಥಿಗಳ ಮುಷ್ಕರದ ಕುರಿತಾಗಿ ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಲಾಗಿದೆ. ಸಮಿತಿಯ ವರದಿ ಬಂದ ನಂತರ ಪರಿಶೀಲಿಸಿ ಕ್ರಮವಹಿಸಲಾಗುವುದು ಎಂದು ಮಾಹಿತಿ ನೀಡಿದ ಅವರು ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು Students Grievance Redressel Cell ನ್ನು ಪುನರ್ ರಚಿಸಿ active ಮಾಡಲಾಗಿದೆ ಎಂದರು.

**2024–ಸಿಂ–3.40(2ಬಿ)** ಶ್ರೀ ಶಶಿಧರ ಬಿ.ಎನ್. ರವರು ಮಾತನಾಡಿ, ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ಈಗಾಗಲೇ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಈವರೆಗೂ ಅಂಕಪಟ್ಟಿ ನೀಡಿಲ್ಲ. ನ್ಯಾಯಾಲಯಕ್ಕೆ ಹೋದ ವಿದ್ಯಾರ್ಥಿಗಳಿಗೆ ಮಾತ್ರ ಅಂಕಪಟ್ಟಿ ನೀಡಲಾಗುತ್ತಿದೆ. ಉಳಿದ ವಿದ್ಯಾರ್ಥಿಗಳ ಭವಿಷ್ಯವೇನು? ಕೆಲವರು ಉದ್ಯೋಗಕ್ಕಾಗಿ ಅಂಕಪಟ್ಟಿ ಇಲ್ಲದೆ ತೊಂದರೆ ಅನುಭವಿಸಿದರೆ, ಉದ್ಯೋಗದಲ್ಲಿರುವವರಿಗೆ ಮುಂಬಡ್ತಿ ಇತ್ಯಾದಿಗಳಿಗೆ ಸಮಸ್ಯೆಯಾಗುತ್ತಿದೆ. ಇದನ್ನೆಲ್ಲಾ ಸಮಗ್ರವಾಗಿ ಪರಿಶೀಲಿಸಿ ಪರಿಹಾರ ಕಂಡುಕೊಳ್ಳಲು ಒಂದು ಸಮಿತಿಯನ್ನು ರಚಿಸುವುದು ಉತ್ತಮ ಎಂದರು.

ಕುಲಸಚಿವ (ಮೌಲ್ಯಮಾಪನ) ರವರು ಮಾತನಾಡಿ, ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳ ಫಲಿತಾಂಶ ಬಂದಿದೆ. ಆದರೆ, ದೂರ ಶಿಕ್ಷಣ ನಿರ್ದೇಶನಾಲಯದವರು ಪರೀಕ್ಷಾಂಗಕ್ಕೆ ಪತ್ರ ಬರೆದು, ಸದರಿ ಕೇಂದ್ರದವರು ವಿದ್ಯಾರ್ಥಿಗಳ ಪ್ರವೇಶ ಶುಲ್ಕವನ್ನು ಪಾವತಿಸಿಲ್ಲವಾದ್ದರಿಂದ ಅಂಕಪಟ್ಟಿ ಮುಂತಾದ ದಾಖಲೆಗಳನ್ನು ತಡೆಹಿಡಿಯುವಂತೆ ತಿಳಿಸಿದ್ದಾರೆ. ಆದುದರಿಂದ, ಶುಲ್ಕ ಬಾಕಿ ಉಳಿಸಿಕೊಂಡಿರುವ ಅಧ್ಯಯನ ಕೇಂದ್ರಗಳ ವಿರುದ್ಧ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಬೇಕಾಗುತ್ತದೆ ಎಂದರು. ಈ ಪ್ರಕರಣದಲ್ಲಿ ಅಧ್ಯಯನ ಕೇಂದ್ರ ದವರು ಪ್ರವೇಶ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ಪಾವತಿಸದೇ ತಪ್ಪು ಮಾಡಿದ್ದಾರೆ. ಆದರೆ, ತಪ್ಪು ಮಾಡದ ವಿದ್ಯಾರ್ಥಿಗಳು ಏಕೆ ತೊಂದರೆ ಅನುಭವಿಸಬೇಕು? ಎಂದರು.

ಚರ್ಚೆಯ ನಂತರ ವಿದ್ಯಾರ್ಥಿಗಳ ಪ್ರವೇಶ ಮತ್ತಿತರ ಶುಲ್ಕವನ್ನು ಈವರೆಗೂ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ವಿಶ್ವವಿದ್ಯಾಲಯಕ್ಕೆ ಪಾವತಿಸದೇ ಬಾಕಿ ಉಳಿಸಿಕೊಂಡಿರುವ ಅಧ್ಯಯನ ಕೇಂದ್ರಗಳ ವಿರುದ್ಧ ದೂರಶಿಕ್ಷಣ ನಿರ್ದೇಶನಾಲಯದವರು ಎಫ್.ಐ.ಆರ್. ದಾಖಲಿಸಿ, ಬಾಕಿ ಶುಲ್ಕ ವಸೂಲಾತಿಗೆ ಕ್ರಮ ಕೈಗೊಳ್ಳುವಂತೆ ನಿರ್ಣಯಿಸಲಾಯಿತು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

14/8

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

14/8/2024

ಸಹಿ/-
ಕುಲಪತಿಗಳು